07 ಸೆಪ್ಟೆಂಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 178 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ


# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಫ್ರಾನ್ಸ್ ಅಧ್ಯಕ್ಷ ಎಮಾನ್ಯುಯೆಲ್ ಮ್ಯಾಕ್ರನ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ದೂರವಾಣಿ ಸಂಭಾಷಣೆ ನಡೆಸಿದ್ದಾರೆ. ಉಕ್ರೇನ್ ಸಂಘರ್ಷ, ಭಾರತ-ಫ್ರಾನ್ಸ್ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿ ಸೇರಿ ವಿವಿಧ ವಿಚಾರಗಳ ಕುರಿತು ಚರ್ಚೆ ನಡೆಸಿರುವುದಾಗಿ ಹೇಳಿದ್ದಾರೆ.



ಸರಳೀಕೃತ ತೆರಿಗೆ : ವಿಕಸಿತ ಭಾರತಕ್ಕೆ ದಿಟ್ಟಹೆಜ್ಜೆ! » 2



ಚಂದ್ರಗ್ರಹಣದ ಪೌರಾಣಿಕ ಹಿನ್ನೆಲೆ » 3



ಜನಾರ್ದನ ರೆಡ್ಡಿ ವಿರುದ್ಧ ಮಾನನಷ್ಟ ಮೊಕದ್ದಮೆ » 4

# ಜನಸ್ಪಂದನಾ ಸಭೆಯಲ್ಲಿ ಸಾವಿರ ಅಹವಾಲು

## ಕಾನೂನು ಬದ್ಧ ಅರ್ಜಿಗಳನ್ನು ವಿಳಂಬ ಮಾಡದೆ ಪರಿಹರಿಸಿ | ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಸೂಚನೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ನಡೆಸಿದ ಜನಸ್ಪಂದನಾ ಸಭೆಯಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೂ ಒಂದು ಸಾವಿರಕ್ಕೂ ಹೆಚ್ಚು ಅಹವಾಲುಗಳನ್ನು ಸ್ವೀಕರಿಸಿ, ಕಾನೂನು ಬದ್ಧ ಸಮಸ್ಯೆಗಳನ್ನು ವಿಳಂಬ ಮಾಡದೆ ಪರಿಹರಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಭೆ ಬಳಿಕ ಮಾತನಾಡಿದ ಸಚಿವರು, 723 ಜನರು ಟೋಕನ್ ತೆಗೆದುಕೊಂಡು ಅಹವಾಲು ಸಲ್ಲಿಸಿದರೆ, 300ಕ್ಕೂ ಹೆಚ್ಚು ಸಾರ್ವಜನಿಕರು ನೇರವಾಗಿ ಬಂದು ತಮ್ಮ ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಒಂದು ಅರ್ಜಿಗೆ 5 ರಿಂದ 6 ಜನ ಆಗಮಿಸಿದ್ದರಿಂದ ಒಟ್ಟು 2 ಸಾವಿರ ಜನರು ಭಾಗವಹಿಸಿ, ಸಮಸ್ಯೆಗಳನ್ನು ಹೇಳಿಕೊಂಡಿದ್ದಾರೆ. ಜನರು ಕೇಳಿದ್ದೆಲ್ಲವನ್ನೂ ಮಾಡಿಕೊಡಲು ಆಗುವುದಿಲ್ಲ. ಯಾವುದು ಮಾಡಿಕೊಡಲು ಸಾಧ್ಯವೋ ಅವುಗಳನ್ನು ಕಾನೂನು ಬದ್ಧವಾಗಿ ಮಾಡಕೊಡಲಾಗುವುದು. ಅರ್ಜಿಗಳನ್ನು ಅಧಿಕಾರಿಗಳು ಕಾಟಾಚಾರಕ್ಕೆ ವಿಳಂಬ ಮಾಡಬಾರದು. ನ್ಯಾಯ ಸಮ್ಮತವಾಗಿ ವಿಲೆ ಮಾಡಿಕೊಡುವಂತೆ ಸೂಚಿಸಿದ್ದೇನೆಂದು ಹೇಳಿದರು.

ಕೆಲವರು ಅಕ್ರಮವಾಗಿ ಸಾಗುವಳಿ ಮಾಡಿಕೊಂಡಿರುವ ಜಮೀನಿಗೆ ದಾಖಲೆ ಮಾಡಿಕೊಡಿ ಎಂದು ಕೇಳುತ್ತಾರೆ, ಅದನ್ನೆಲ್ಲ ಮಾಡಿಕೊಡಲು ಆಗುವುದಿಲ್ಲ. ಇಂದು ಸಲ್ಲಿಕೆಯಾದ ಅರ್ಜಿಗಳಲ್ಲಿ ಶೇ.50 ರಷ್ಟು ಹೇಚ್‌ಆರ್‌ಪಿಗೆ ಸಂಬಂಧಿಸಿದ್ದಾಗಿವೆ. ಹೇಮಾವತಿ ಭೂ ಸಂತ್ರಸ್ತರಿಗೆ ಮೀಸಲಾಗಿರುವ ಜಮೀನನ್ನು ಉಳುಮೆ ಮಾಡುತ್ತಿರುವವರು ರೈತರು ಫಾರಂ-53ನಲ್ಲಿ ಮಂಜೂರು ಮಾಡಲು ಮನವಿ ಮಾಡಿದರೆ ನೀಡಲು ಸಾಧ್ಯವಿಲ್ಲ. ಅಕ್ರಮಕ್ಕೆ ಅಕ್ರಮವೇ ಪರಿಹಾರವಲ್ಲ ಎಂದರು.

» ನಾಲ್ಕನೇ ಪುಟದಲ್ಲಿ




### ಸಭೆಗೆ ಶಾಸಕರ ಗೈರು

ಜಿಲ್ಲಾ ಮಟ್ಟದ ಸಭೆಗೆ ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಅವರೇ ಗೈರಾಗಿದ್ದರು. ಸಭೆಯಲ್ಲಿ ಹೆಚ್ಚಿನ ಸಮಸ್ಯೆಗಳು ನಗರ, ಹಾಸನ ತಾಲ್ಲೂಕು ವ್ಯಾಪ್ತಿಗೆ ಸಂಬಂಧಿಸಿದ್ದವಾಗಿದ್ದರೂ ಶಾಸಕರು ಅನುಪಸ್ಥಿತಿ ಎದ್ದು ಕಾಣುತ್ತಿತ್ತು. ಶಾಸಕ ಸಿ.ಎನ್.ಬಾಲಕೃಷ್ಣ, ಸಿಮೆಂಟ್ ಮಂಜು ಅವರು ಮಧ್ಯಾಹ್ನದವರೆಗೂ ಭಾಗವಹಿಸಿದ್ದರು. ಸಂಸದ ಹೊರ ರಾಜ್ಯ ಪ್ರವಾಸದಲ್ಲಿರುವುದರಿಂದ ಆಗಮಿಸಲಿರಲಿಲ್ಲ. ಶಿವಲಿಂಗೇಗೌಡ ಅವರು ಬೆಳಿಗ್ಗೆಯಿಂದ ಸಂಜೆವರೆಗೂ ಸಚಿವರೊಂದಿಗೆ ಭಾಗವಹಿಸಿ ಜನರ ಸಮಸ್ಯೆ ಆಲಿಸಿದರು. ಎ.ಮಂಜು, ಹೆಚ್.ಡಿ.ರೇವಣ್ಣ, ಹೆಚ್.ಕೆ.ಸುರೇಶ್ ಆಗಮಿಸಿರಲಿಲ್ಲ.

> ಸಭೆಯಲ್ಲಿ ಜನರಿಂದ ದೂರುಗಳು, ಅಭಿಪ್ರಾಯಗಳು ಬಂದಿವೆ. ಅವುಗಳನ್ನು ಪರಿಶೀಲಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಈ ಬಗ್ಗೆ 10 ದಿನಗಳ ನಂತರ ಕೆಡಿಪಿ ಸಭೆ ನಡೆಸಿ ಪರಿಶೀಲಿಸುತ್ತೇನೆ. ಮುಂದಿನ ದಿನಗಳಲ್ಲಿ ತಾಲ್ಲೂಕು ಮಟ್ಟದಲ್ಲೂ ಜನಸ್ಪಂದನ ಸಭೆ ಮಾಡಲು ಉದ್ದೇಶಿದಿದ್ದೇವೆ.
> -ಕೃಷ್ಣಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ

ಪ್ರಮುಖಾಂಶಗಳು
- ಬೆಳಿಗ್ಗೆ 11.30ರಿಂದ ಸಂಜೆ 7.45ರವೆಗೆ ಸಭೆ
- 723 ಜನರಿಂದ ಟೋಕನ್ ಸ್ವೀಕಾರ
- 300ಕ್ಕೂ ಹೆಚ್ಚು ಜನರು ನೇರವಾಗಿ ಭೇಟಿ

### ಕಾಟಾಚಾರದ ಸಭೆಯಾಗಬಾರದು

ಸಭೆ ಆರಂಭದಲ್ಲಿ ಮಾತನಾಡಿದ ಸಿಚಿವರು, ಜನಸ್ಪದನಾ ಸಭೆ ಕಾಟಾಚಾರದ ಸಭೆಯಾಗಬಾರದು, ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಧಿಕಾರಿಗಳು ತಕ್ಷಣವೇ ಸಮಸ್ಯೆಗಳನ್ನು ಬಗೆಹರಿಸಬೇಕು. ಪರಿಹರಿಸಲು ಆಗದಿದ್ದರೆ ಜನರಿಗೆ ನೇರವಾಗಿಯೇ ಆಗುವುದಿಲ್ಲವೆಂದು ತಿಳಿಸಬೇಕು. ಅನಗತ್ಯವಾಗಿ ಕಚೇರಿಗೆ ಅಲೆಯುವಂತೆ ಮಾಡಬಾರದು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಕಾಟಾ ಚಾರಕ್ಕೆ ಸಭೆ ನಡೆಸುವುದು ಬೇಡ, ಜನರಿಗೆ ಅನುಕೂಲವಾಗುವುದಾದರೆ ಮಾತ್ರ ಸಭೆ ಮಾಡೋಣ, ಕಾನೂನು ಬದ್ಧವಲ್ಲದ ಕೆಲಸಗಳು ಆಗುವುದಿಲ್ಲ ಎಂದೇ ಅಧಿಕಾರಿಗಳು ಬರೆದುಕೊಡಿ, ಆಗದ ಕೆಲಸ ಮಾಡಿಕೊಡುತ್ತೇನೆ ಎಂದು ಸುಳ್ಳು ಭರವಸೆ ನೀಡಿ, ಜನರು ಕಚೇರಿಗೆ ಅಲೆಯುವಂತೆ ಮಾಡಬಾರದು ಎಂದು ತಿಳಿಸಿದರು.



ಹಾಸನ: ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಬೆಳಿಗ್ಗೆ 11.30ಕ್ಕೆ ಆರಂಭವಾದ ಜನಸ್ಪಂದನಾ ಸಭೆ ಸಂಜೆ 7.45ರ ವರೆಗೂ ಮಧ್ಯಾಹ್ನದ ಊಟಕ್ಕೆ ಕೆಲ ಸಮಯವನ್ನು ಹೊರತುಪಡಿಸಿದರೆ ನಿರಂತರವಾಗಿ ನಡೆಯಿತು. ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಅವರು ಕೊನೆ ವರೆಗೂ ಸಾಥ್ ನೀಡಿದರು.

ಸಚಿವ ಕೃಷ್ಣಬೈರೇಗೌಡ ಅವರು, ಪ್ರತಿಯೊಬ್ಬ ಸಾರ್ವಜನಿಕರ ಅಹವಾಲುಗಳನ್ನು ಬೆಳಿಗ್ಗೆಯಿಂದ ಸಂಜೆವರೆಗೂ ಒಂದೇ ಜಾಗದಲ್ಲಿ ಕುಳಿತು ಆಲಿಸಿ, ಸಮಸ್ಯೆ ಪರಿಹರಿಸಲು ಕ್ರಮ ಕೈಗೊಂಡು, ಕಾಲಮಿತಿಯಲ್ಲಿ ಸಮಸ್ಯೆ ಬಗೆಹರಿಸುವಂತೆ ಸ್ಥಳದಲ್ಲಿದ್ದ ಜಿಲ್ಲಾಧಿಕಾರಿ, ಜಿ.ಪಂ. ಸಿಇಒ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಉಪವಿಭಾಗಾಧಿಕಾರಿಗಳು, ತಹಶೀಲ್ದಾರ್‌ಗಳು, ಎಡಿಎಲ್‌ಆರ್, ಡಿಡಿಎಲ್‌ಆರ್‌ಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಖಾತೆ ಬದಲಾವಣೆ, ರಸ್ತೆ ಸಮಸ್ಯೆ, ಪಿತ್ರಾರ್ಜಿತ ಆಸ್ತಿ ವರ್ಗಾವಣೆ, ಪಹಣಿ ತಿದ್ದುಪಡಿ, ಶಾಲೆ, ಅಂಗನವಾಡಿಗಳಿಗೆ ಮೂಲಸೌಕರ್ಯ, ರಸ್ತೆ, ಚರಂಡಿ, ಕೆರೆ ಒತ್ತುವರಿಯಂತಹ ಹಲವು ದೂರುಗಳು ಸಲ್ಲಿಕೆಯಾದವು.



# ಹೃದಯ ಶ್ರೀಮಂತಿಕೆ ಮೆರೆದರಷ್ಟೇ ನೆಮ್ಮದಿ ಬದುಕು

• ಪ್ರಜೋದಯ ವರದಿ



**ಹಾಸನ:** ಶ್ರೀಮಂತಿಕೆ ಹೃದಯಕ್ಕೆ ಬರಬೇಕೆ ಹೊರತು ತಲೆಗೆ ಅಲ್ಲ. ಆರ್ಥಿಕವಾಗಿ ಸದೃಢರಾಗಿದ್ದರೆ ಬದುಕು ಪರಿಪೂರ್ಣ ಎಂಬ ತಪ್ಪು ಕಲ್ಪನೆಯಿಂದ ಹೊರಬರಬರಬೇಕೆಂದು ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ನಗರದ ಆದಿಚುಂಚನಗಿರಿ ಕಲ್ಯಾಣ ಮಂಟಪದಲ್ಲಿ ಹಂಪಿ ಹೇಮಕೂಟ, ಗಾಯಿತ್ರಿ ಪೀಠಾಧೀಶ ಶ್ರೀ ದಯಾನಂದಪುರಿ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಜಿಲ್ಲಾ ದೇವಾಂಗ ನೌಕರರ ಸಂಘ, ಜಿಲ್ಲೆಯ ಎಲ್ಲಾ ದೇವಾಂಗ ಸಂಘಗಳ ಸಹಯೋಗದಲ್ಲಿ ಜಿಲ್ಲಾ ದೇವಾಂಗ ವಿದ್ಯಾರ್ಥಿಗಳಿಗೆ ಶನಿವಾರ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ, ನಿವೃತ್ತ ದೇವಾಂಗ ನೌಕರರಿಗೆ, ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇಶದಲ್ಲಿ ಅನೇಕ ಶ್ರೀಮಂತರನ್ನು ಕಂಡಿದ್ದೇವೆ, ಶ್ರೀಮಂತಿಕೆ ಹೃದಯಕ್ಕೆ ಬರಬೇಕು. ತಲೆಗೆ ಬಂದಾಗ ಅನಾಹುತಗಳನ್ನು ಕಂಡಿದ್ದೇವೆ. ಬಡತನ ಮನಸ್ಸಿಗೆ ಬರಬೇಕು, ತಲೆಗೆ ಏರಿದಾಗ ಕಷ್ಟ. ಇಂತಹ ಸಂದರ್ಭದಲ್ಲಿ ಭಗವಂತ ಕೊಟ್ಟಿರುವ ಜ್ಞಾನದ ಬೆಳಕನ್ನು ಸದುಪಯೋಗ ಪಡಿಸಿಕೊಳ್ಳುತ್ತಾ ಅವಕಾಶಗಳನ್ನು ಬಳಸಿಕೊಳ್ಳುತ್ತಾ, ಉನ್ನತ ಸ್ಥಾನಕ್ಕೆ ಏರಿದಾಗ ಯಾವುದೇ ಮೀಸಲಾತಿಯ ಅವಶ್ಯಕತೆ ಬೇಕಿಲ್ಲ. ಈ ನಿಟ್ಟಿನಲ್ಲಿ ಕಲಿಕೆಗೆ ಹೆಚ್ಚಿನ ಮಹತ್ವ ನೀಡಿ, ಹೆಚ್ಚಿನ ಪುರಸ್ಕಾರಗಳನ್ನು ಪಡೆಯುತ್ತಾ ಸಮಾಜದಲ್ಲಿ ಕೀರ್ತಿವಂತರಾಗಿ ಎಂದು ಹೇಳಿದರು.

ಆದಿಚುಂಚನಗಿರಿ ಮಠದ ಭೈರವೈಕ್ಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ನುಡಿಯಂತೆ, ಉನ್ನತ ಶಿಕ್ಷಣ ಪಡೆದ ವ್ಯಕ್ತಿಗಳಲ್ಲಿ ಭ್ರಷ್ಟರನ್ನು ಕಾಣಬಹುದು. ಸಂಸ್ಕಾರ ಕಲಿತ ವ್ಯಕ್ತಿ ಎಂದಿಗೂ ಭ್ರಷ್ಟರಾಗಲು ಸಾಧ್ಯವಿಲ್ಲ. ಆದ್ದರಿಂದ ಸಂಸ್ಕಾರ, ವಿನಯ, ವಿವೇಕ, ತಂದೆ-ತಾಯಿ ಪಟ್ಟ ಕಷ್ಟವನ್ನು ಅರ್ಥೈಸಿಕೊಂಡು ಎತ್ತರಕ್ಕೆ ಬೆಳೆಯಬೇಕೆಂದರು.

ಮಾಜಿ ಶಾಸಕ ಎಂ.ಡಿ.ಲಕ್ಷ್ಮೀನಾರಾಯಣ ಅವರು ಮಾತನಾಡಿ, ಪ್ರತಿಭಾ ಪುರಸ್ಕಾರವು ವಿದ್ಯಾರ್ಥಿಗಳ ಜಾಣ್ಮೆಗೆ ದೊರೆತ ಗೌರವ. ಮಕ್ಕಳ ಜವಾಬ್ದಾರಿಯನ್ನು ಈ ಕಾರ್ಯಕ್ರಮ ಹೆಚ್ಚಿಸಿದ್ದು ಉನ್ನತ

» ನಾಲ್ಕನೇ ಪುಟದಲ್ಲಿ

## ತಪ್ಪು ಮಾಡಿದವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ: ಕೃಷ್ಣ ಬೈರೇಗೌಡ

# ಪಿಎಂಎವೈ ಅಕ್ರಮ: ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದೆ ಕ್ರಮ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಅಕ್ರಮದಲ್ಲಿ ಭಾಗಿ ಯಾಗಿರುವ ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಂಡು, ದಂಡನೆಗೆ ಗುರಿ ಪಡಿಸಲಾಗುವುದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು.



ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ಅಕ್ರಮದಲ್ಲಿ ಮೇಲಾಧಿಕಾರಿಗಳ ಪಾತ್ರ ಇದ್ದರೆ ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತೇವೆ. ಯಾರ ಬಗ್ಗೆಯೂ ಯಾವುದೇ ಮುಲಾಜಿಲ್ಲ. ಕ್ರಮ ಕೈಗೊಳ್ಳಲು ಸ್ವಲ್ಪ ಮಟ್ಟಿಗೆ ಸ್ವಾತಂತ್ರ್ಯ ಇದೆ. ಜಿಲ್ಲಾ ನೋಡಲ್ ಅಧಿಕಾರಿ ರಾಜೇಶ್ ಎಂಬಾತ ಹಗರಣದ ಮಾಸ್ಟರ್‌ಮೈಂಡ್ ಎಂಬುದು ಮೇಲ್ನೋಟಕ್ಕೆ ಅನ್ನಿಸಿದೆ. ಸಕಲೇಶಪುರ ನಂತರ, ಅರಸೀಕೆರೆ ತಾಲ್ಲೂಕಿನ ಬಾಣಾವರ ಗ್ರಾಮ ಪಂಚಾಯಿತಿಯಲ್ಲಿ ಅಕ್ರಮ ಬೆಳಕಿಗೆ ಬಂದಿದ್ದು, ಈ ಸಂಬಂಧ ಅಲ್ಲಿನ ಪಿಡಿಒ ಅಮಾನತುಗೊಳಿಸಿ ಪ್ರಕರಣ ದಾಖಲಿಸಲಾಗಿದೆ ಎಂದು ಹೇಳಿದರು.

ಇದರ ಸೂತ್ರಧಾರ ರಾಜೇಶ್ ತಲೆಮರೆಸಿಕೊಂಡಿದ್ದು, ಆತನ ಮೇಲೂ ಎಫ್‌ಐಆರ್ ಆಗಿದೆ. ಎಲ್ಲೇ ಇದ್ದರೂ ಹುಡುಕಿ ಕೂಡಲೇ ಬಂಧಿಸುವಂತೆ

> ಕೆಳ ಹಂತದಿಂದ ಮೇಲ್ಮಟ್ಟದರೆಗೂ ಹೇಗೆ ಲೋಪವಾಗಿದೆ ಎಂಬುದರ ಬಗ್ಗೆ ವಸತಿ ಇಲಾಖೆ ಕಾರ್ಯದರ್ಶಿ ಅವರಿಂದ ವಿವರಣೆ ಕೇಳಿದ್ದೇನೆ. ಅಗತ್ಯ ಬಿದ್ದರೆ ಈ ಬಗ್ಗೆಯೂ ತನಿಖೆ ಮಾಡಲು ಹೇಳುತ್ತೇನೆ.
> -ಕೃಷ್ಣಬೈರೇಗೌಡ, ಜಿಲ್ಲಾ ಉಸ್ತುವಾರಿ ಸಚಿವ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚಿಸಿದ್ದೇನೆ. ಅವರನ್ನು ಜೈಲಿಗೆ ಹಾಕೋದು ಮಾತ್ರವಲ್ಲ, ಶಿಕ್ಷೆಯೂ ಆಗಬೇಕು. ಯಾರೇ ತಪ್ಪು ಮಾಡಿದರೂ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಿ ಎಂದು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ ನಿರ್ವಹಣಾಧಿಕಾರಿಗೆ ಸೂಚನೆ ನೀಡಿದ್ದೇನೆ ಎಂದರು.

ಯಾರದೋ ಹೆಸರಿನಲ್ಲಿ ಮಂಜೂರಾಗಿರುವ ಮನೆಗಳ ಹಣವನ್ನು ಬೇರೆಯವರ ಹೆಸರಿಗೆ ವರ್ಗಾಯಿಸಿ ದುರ್ಬಳಕೆ ಮಾಡಲಾಗಿದೆ. ಇದೊಂದು ರೀತಿಯಲ್ಲಿ ದರೋಡೆ. ಮನೆ ಕಟ್ಟಿದ್ದಾರಾ, ಇಲ್ಲವೋ ಎಂದು ನೋಡಿಲ್ಲ, ಫಲಾನುಭವಿ ಅಲ್ಲದವರ ಬ್ಯಾಂಕ್ ಖಾತೆಗೆ ಹಣ ಹಾಕಿ ಪಡೆದುಕೊಂಡಿದ್ದಾರೆ. ಮನೆ ಮಂಜೂರಾತಿಯಲ್ಲಿ ಅಕ್ರಮ ಎಸಗಿರುವವರು ಯಾರೇ ಆಗಲಿ ಅವರ ವಿರುದ್ಧ ಕ್ರಮದ ಜೊತೆಗೆ ಶಿಕ್ಷೆಯೂ ಆಗಲಿದೆ ಎಂದು ತಿಳಿಸಿದರು.

**ಭ್ರಷ್ಟರಿಗೆ ಶಿಕ್ಷೆಯಾಗಬೇಕು**

ಅಕ್ರಮ ಮಾಡಿರುವ ಹಣವನ್ನು ವಾಪಾಸ್ ಕೊಟ್ಟರೆ ಮಾಫಿ ಮಾಡುವುದಿಲ್ಲ. ಆ ಹಣ ನಮಗೆ ಬೇಕಿಲ್ಲ. ಹಾಗೆ ಮಾಡಿದರೆ ತಪ್ಪು ಮಾಡುವವರಲ್ಲಿ ಭಯ ಇರುವುದಿಲ್ಲ, ತಪ್ಪು ಮಾಡುತ್ತಲೇ ಇರುತ್ತಾರೆ. ಹಾಗಾಗಿ ಭ್ರಷ್ಟರಿಗೆ ಶಿಕ್ಷೆ ಆಗಬೇಕು. ಈ ಬಗ್ಗೆ ಕೆಲವು ಪಿಡಿಒಗಳಿಗೆ ಮಾಹಿತಿ ಇಲ್ಲ.

» ನಾಲ್ಕನೇ ಪುಟದಲ್ಲಿ

# ವಸತಿ ಗೋಲ್ಮಾಲ್: ಸಿಇಒ, ಇಒ, ಪಿಡಿಒ ಅಮಾನತುಗೊಳಿಸಿ

## ಸರ್ಕಾರಕ್ಕೆ ಶಾಸಕರಾದ ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಅವ್ಯವಹಾರಕ್ಕೆ ಮುಖ್ಯ ಕಾರಣವಾಗಿರುವ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ, ಪಿಡಿಒಗಳನ್ನು ಸೇವೆಯಿಂದ ಅಮಾನತುಗೊಳಿಸಿ ತನಿಖೆ ನಡೆಸಬೇಕೆಂದು ಬಿಜೆಪಿ ಶಾಸಕರಾದ ಹೆಚ್.ಕೆ.ಸುರೇಶ್, ಸಿಮೆಂಟ್ ಮಂಜು ಅವರು ಒತ್ತಾಯಿಸಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರಿಗಳನ್ನು ಕೂಡಲೇ ಅಮಾನತುಗೊಳಿಸಿ, ತನಿಖೆ ನಡೆಸಿ ಶಿಕ್ಷೆಗೆ ಗುರಿಪಡಿಸಬೇಕು. ಇಲ್ಲದಿದ್ದರೆ ಜಿಲ್ಲಾ ಪಂಚಾಯಿತಿ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಸಕಲೇಶಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪಿಎಂಎವೈ ವಸತಿ ಯೋಜನೆಯಲ್ಲಿ 3 ಕೋಟಿ ರೂ. ಗೂ ಹೆಚ್ಚು ಅವ್ಯವಹಾರ ನಡೆದಿದೆ. 219 ಕ್ಕೂ ಹೆಚ್ಚು ಅರ್ಹ ಫಲಾನುಭವಿಗಳಿಗೆ ಸೇರಬೇಕಿದ್ದ ಅನುದಾನವನ್ನು ಜಿಲ್ಲಾ ವಸತಿ ನೋಡಲ್ ಅಧಿಕಾರಿ ಕೆ.ಎಂ.ರಾಜೇಶ್ ಮತ್ತು ಇತರೆ ಅಧಿಕಾರಿಗಳು ದುರುಪಯೋಗ ಪಡಿಸಿ ಕೊಂಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆಂದು ತಿಳಿಸಿದರು.




ಹೊರಗುತ್ತಿಗೆ ಆಧಾರದ ಮೇಲೆ ಜಿಲ್ಲಾ ವಸತಿ ನೋಡೆಲ್ ಅಧಿಕಾರಿಯನ್ನು ಕರ್ತವ್ಯಕ್ಕೆ ನಿಯೋಜನೆ ಮಾಡಿರುವುದು ಸರ್ಕಾರದ ನಿರ್ಲಕ್ಷ್ಯ. ಈತ ಫಲಾನುಭವಿಗಳ ಮನೆ ನಿರ್ಮಾಣದ ಪ್ರಗತಿಯನ್ನು ತೋರಿಸುವ ನಕಲಿ ಫೋಟೋಗಳನ್ನು ಅಪ್‌ಲೋಡ್ ಮಾಡಿ, ಸುಳ್ಳು ವರದಿ ಸೃಷ್ಟಿಸಿದ್ದಾರೆ. ಸಕಲೇಶಪುರ ತಾಲ್ಲೂಕಿನ ಫಲಾನುಭವಿಗಳ ಹೆಸರು, ಗ್ರಾಮ ಮತ್ತು ಮಂಜೂರಾತಿ ಸಂಖ್ಯೆಗಳನ್ನು ಬಳಸಿಕೊಂಡು ಅನುದಾನವನ್ನು ಹಾಸನ ತಾಲ್ಲೂಕಿನ ಜನರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದಾರೆ.

ರಾಜೇಶ್ ಮೇಲೆ ಎಫ್‌ಐಆರ್ ದಾಖಲಾಗಿದ್ದು ತನಿಖೆ ನಡೆಯುತ್ತಿದೆ. ಇದರ ಹಿಂದೆ ಕೆಲ ಅಧಿಕಾರಿ ವರ್ಗದವರ ಕೈವಾಡ ಇರುವುದು ಸ್ಪಷ್ಟವಾಗಿದೆ. ತನಿಖೆಯನ್ನು ಇನ್ನಷ್ಟು ತೀವ್ರಗೊಳಿಸಿ ಭಾಗಿಯಾದಂತಹ ಅಧಿಕಾರಿಗಳನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಆಗ್ರಹಿಸಿದರು.

**ಹಗರಣ ಜಿಲ್ಲೆಗೆ ಕಪ್ಪು ಚುಕ್ಕೆ**

ಪಿಎಂಎವೈ ಹಗರಣ ಜಿಲ್ಲೆಗೆ ದೊಡ್ಡ ಕಪ್ಪುಚುಕ್ಕೆ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸೇರಿ ಅನೇಕರು ಭಾಗಿಯಾಗಿದ್ದಾರೆ ಎಲ್ಲರನ್ನೂ ಬಂಧಿಸಿ ಕ್ರಮ ಕೈಗೊಳ್ಳ ಬೇಕೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಒತ್ತಾಯಿಸಿದರು.

ಬಾಣಾವರ ಗ್ರಾಮ ಪಂಚಾಯಿತಿ ವ್ಯಾಪ್ತಿಯ 93 ಮನೆ ಸೇರಿ ಒಟ್ಟು ಜಿಲ್ಲೆಯಲ್ಲಿ 340 ಮನೆ ಹಂಚಿಕೆಯಲ್ಲಿ ದುರ್ಬಳಕೆಯಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಮ್ಮದು ಕಪ್ಪುಚುಕ್ಕೆ ಇಲ್ಲದ ಆಡಳಿತ

» ನಾಲ್ಕನೇ ಪುಟದಲ್ಲಿ

# ಎಂಟಿಇಎಸ್‌ನ ಮೂವರು ನಿರ್ದೇಶಕರ ಅಮಾನತು

• ಪ್ರಜೋದಯ ವರದಿ

**ಹಾಸನ:** ಸಂಸ್ಥೆಯ ನಿಯಮ ಉಲ್ಲಂಘನೆ ಆರೋಪದಡಿ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯ ಮೂವರು ನಿರ್ದೇಶಕರನ್ನು ಅಮಾನತುಗೊಳಿಸಿರುವುದಾಗಿ ಸಂಸ್ಥೆಯ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಅವರು ತಿಳಿಸಿದ್ದಾರೆ.

ಅಮಾನತು ಆದೇಶದ ಪ್ರತಿಯನ್ನು ಮಾಧ್ಯಮಗಳಿಗೆ ರವಾನೆ ಮಾಡಿರುವ ಅವರು, ನಿರ್ದೇಶಕರಾದ ಡಾ||ಅರವಿಂದ್, ಎಸ್.ಜಿ.ಶ್ರೀಧರ್ ಹಾಗು ಜಿ.ಆರ್.ಶ್ರೀನಿವಾಸ್ ಅವರನ್ನು ಅಮಾನತು ಮಾಡಲಾಗಿದೆ. ನಿರ್ದೇಶಕರು ಸಂಸ್ಥೆಗೆ ಸೇರಿದ ಕಟ್ಟಡದ ಬಾಡಿಗೆದಾರರು ಮತ್ತು ಫಲಾನುಭವಿಗಳಾಗಿರಬಾರದೆಂಬ ನಿಯಮವಿದೆ. ಕಾನೂನು ಉಲ್ಲಂಘನೆಯಾಗಿರುವುದಾಗಿ ಸಂಘದ ಸದಸ್ಯರು ದೂರು ನೀಡಿದ ಹಿನ್ನಲೆ ಪರಿಶೀಲನೆ ನಡೆಸಿದಾಗ ಆರೋಪ ಸಾಬೀತಾಗಿದೆ ಎಂದು ಅವರು ಹೇಳಿದ್ದಾರೆ.

ನಗರ ಬಸ್ ನಿಲ್ದಾಣದ ಮುಂಭಾಗವಿರುವ ಸಂಸ್ಥೆಗೆ ಸೇರಿದ ವಿದ್ಯಾಭವನ ಕಟ್ಟಡದಲ್ಲಿ ನಿರ್ದೇಶಕ ಡಾ||ಅರವಿಂದ್ ಕೊಠಡಿಯನ್ನು ಬಾಡಿಗೆ ಪಡೆದು ಅದನ್ನು ಬೇರೆಯವರಿಗೆ ಹೆಚ್ಚಿನ ಹಣಕ್ಕೆ ಬಾಡಿಗೆ ನೀಡಿದ್ದಾರೆ. ಅದೇ ಕಟ್ಟಡದಲ್ಲಿ ಜಿ.ಆರ್.ಶ್ರೀನಿವಾಸ್ ಅವರು ಜಿಆರ್‌ಆರ್

» ನಾಲ್ಕನೇ ಪುಟದಲ್ಲಿ

### ಕಾನೂನು ಬಾಹಿರ ನಿರ್ಧಾರ



**ಹಾಸನ:** ತಾವು ಸೇರಿ ಮೂವರನ್ನು ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿಯ ನಿರ್ದೇಶಕ ಸ್ಥಾನದಿಂದ ಅಮಾನತುಗೊಳಿಸಿರುವ ನಿರ್ಧಾರವು ಕಾನೂನು ಬಾಹಿರವೆಂದು ಸಂಸ್ಥೆಯ ನಿರ್ದೇಶಕ ಡಾ|| ಅರವಿಂದ್ ಅವರು ಹೇಳಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು ಅಮಾನತುಗೊಳಿಸಿರುವ ಆದೇಶದ ಪ್ರತಿ ತಮ್ಮ ಕೈಸೇರಿಲ್ಲ. ಈ ನಿರ್ಧಾರವು ಸಂಸ್ಥೆಯ ಘನತೆಗೆ ಚ್ಯುತಿತಂದಂತಾಗಿದೆ. ಯಾವುದೇ ಆಡಳಿತಾತ್ಮಕ ಕ್ರಮ ತೆಗೆದುಕೊಳ್ಳುವ 15ದಿನಗಳ ಮೊದಲು ನೋಟೀಸ್ ನೀಡಿ ನಮ್ಮ ಪ್ರತಿಕ್ರಿಯೆ ನಂತರ ತೀರ್ಮಾನ ತೆಗೆದುಕೊಳ್ಳಬೇಕು. ಈ ನಿಯಮವನ್ನು ಆಡಳಿತ ಮಂಡಳಿಯು ಅನುಸಿರಿಸಿಲ್ಲವೆಂದು ಆರೋಪಿಸಿದ್ದಾರೆ.

ನಿರ್ದೇಶಕರ ಅಮಾನತು ಪ್ರಕ್ರಿಯೆಯನ್ನು ಮಂಡಳಿಯ ಕಾರ್ಯಕಾರಿ ಸಮಿತಿ ಮುಂದಿಟ್ಟು 24 ಮಂದಿ ನಿರ್ದೇಶಕರ ಪೈಕಿ 18 ಮಂದಿ ನಿರ್ದೇಶಕರ ಒಪ್ಪಿಗೆಯನ್ನು ಪಡೆದುಕೊಳ್ಳುವುದು ಕಡ್ಡಾಯ. ಈ ನಿಯಮ ಪಾಲನೆ ಮಾಡದೆ ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುವ ಮೂಲಕ ಕಾನೂನು ಉಲ್ಲಂಘಿಸಿದ್ದು, ಈ ನಿರ್ಧಾರಕ್ಕೆ ಯಾವುದೇ ಕಾನೂನಿನ ಮಾನ್ಯತೆ ಇಲ್ಲವೆಂದು ತಿಳಿಸಿದ್ದಾರೆ.

ನಿರ್ದೇಶಕರ ಕುಟುಂಬದವರು ಕಾಲೇಜಿನ ಫಲಾನುಭವಿಗಳಾಗಿದ್ದಾರೆ ಎಂಬ ಆರೋಪವನ್ನು ಅಲ್ಲಗಳೆದಿರುವ ಅವರು ಆಡಳಿತ ಮಂಡಳಿಯ ನಿರ್ದೇಶಕರಾಗಿರುವ ಕೆಲವರ ಕುಟುಂಬ ಸದಸ್ಯರು ಕಾಲೇಜಿನ ಉನ್ನತ ಹುದ್ದೆಗಳಲ್ಲಿದ್ದಾರೆ. ಅಂತಹವರನ್ನು ಅಮಾನತು ಗೊಳಿಸಬೇಕಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಆಡಳಿತ ಮಂಡಳಿಯ ವಿವಾದಕ್ಕೆ ಸೋಮವಾರ ನಡೆಯಲಿರುವ ವಿಶ್ವಾಸ ನಿರ್ಣಯ ಸಭೆಯಲ್ಲಿ ಸರಿಯಾದ ಉತ್ತರ ದೊರೆಯಲಿದೆ ಎಂದು ಹೇಳಿದ್ದಾರೆ.

# ಜಮೀನು ವ್ಯಾಜ್ಯ: ಮಾರಕಾಸ್ತ್ರಗಳಿಂದ ಐವರ ಮೇಲೆ ಹಲ್ಲೆ

• ಪ್ರಜೋದಯ ವರದಿ

**ಅರಕಲಗೂಡು:** ಜಮೀನು ವ್ಯಾಜ್ಯ ಸಂಬಂಧ ದೂರು ಸಲ್ಲಿಸಲು ಹಾಸನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರ ಅಧ್ಯಕ್ಷತೆಯ ಜನ ಸಂಪರ್ಕ ಸಭೆಗೆ ಬರುತ್ತಿದ್ದ ಕುಟುಂಬದ ಐವರ ಮೇಲೆ ಸಂಬಂಧಿಕರೇ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿರುವ ಘಟನೆ ತಾಲ್ಲೂಕಿನ ವಡ್ಡರಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದಿದೆ.

ಗ್ರಾಮದ ನಿಂಗರಾಜಮ್ಮ ಪುತ್ರರಾದ ವಿಠ್ಠಲ್ ಹಾಗು ರಾಜಶೇಖರ್ ಗಾಯಾಳುಗಳು. ನಿಂಗರಾಜಮ್ಮನ ಅಣ್ಣ ಹಾಲಪ್ಪ, ಅವರ ಮಕ್ಕಳಾದ ರಾಜಪ್ಪ, ರತನ್ ಹಾಗು ಇತರರು ಹಲ್ಲೆ ನಡೆಸಿದ್ದಾರೆನ್ನಲಾಗಿದೆ. ಘಟನೆಯಲ್ಲಿ ವಿಠಲ್‌ಗೆ ಸೇರಿದ ಕಾರು ಸಂಪೂರ್ಣ ಜಖಂಗೊಂಡಿದೆ.

ಘಟನೆ ವಿವರ

ನಿಂಗರಾಜಮ್ಮ ಹೆಸರಿನಲ್ಲಿ 3ಎಕರೆ 19 ಗುಂಟೆ ಜಾಗವಿದ್ದು, ಅವರು ಬದುಕಿದ್ದಾಗಲೇ ನಕಲಿ ಮರಣ ಪ್ರಮಾಣ ಪತ್ರ ಪಡೆದು ಅಣ್ಣ ಹಾಲಪ್ಪ ಹಾಗು ಮಕ್ಕಳು ತಮ್ಮ ಹೆಸರಿಗೆ ಖಾತೆ ಮಾಡಿ ಕೊಂಡಿದ್ದಾರೆ ಎನ್ನಲಾಗಿದೆ. ಈ ಸಂಬಂಧ ನಿಂಗರಾಜಮ್ಮ ಅವರ ಪುತ್ರ ವಿಠ್ಠಲ್ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಜಮೀನು ವಿಚಾರವಾಗಿ ಎರಡೂ ಕುಟುಂಬಗಳ ನಡುವೆ ವೈಮನಸ್ಸು ಇತ್ತು.

ಜಿಲ್ಲಾ ಉಸ್ತುವಾರಿ ಸಚಿವರ ಜನ ಸಂಪರ್ಕ ಸಭೆಯಲ್ಲಿ ದೂರು ಸಲ್ಲಿಸಿದರೆ ನ್ಯಾಯ ಸಿಗ ಬಹುದೆಂದು ವಿಠ್ಠಲ್ ತಮ್ಮ ಕಾರಿನಲ್ಲಿ ನಿಂಗರಾಜಮ್ಮ ಹಾಗು ರಾಜಶೇಖರ್



ಅವರೊಂದಿಗೆ ಹಾಸನಕ್ಕೆ ಬರುತ್ತಿದ್ದರು. ಆಗ ಅಡ್ಡಗಟ್ಟಿದ ಹಾಲಪ್ಪ ಮತ್ತಿತರರು ಡ್ರ್ಯಾಗನ್, ಲಾಂಗ್, ದೊಣ್ಣೆಗಳಿಂದ ಮನಬಂದಂತೆ ಥಳಿಸಿದ್ದಾರೆ. ಸ್ಥಳೀಯರು ಹೊಡೆದಾಟದ ವಿಡಿಯೋ ಅನ್ನು ಮೊಬೈಲ್ ಕ್ಯಾಮರಾಗಳಲ್ಲಿ ಸೆರೆಹಿಡಿದಿದ್ದಾರೆ. ಗಾಯಾಳುಗಳನ್ನು ಕೊಣನೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳೀಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಒಂದು ವರ್ಷದೊಳಗೆ ಕಾಮಗಾರಿ ಪೂರ್ಣ | ಸಚಿವ ಕೃಷ್ಣಬೈರೇಗೌಡ ಭರವಸೆ

# ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯಾರಂಭಕ್ಕೆ ಮಾಸ್ಟರ್ ಪ್ಲ್ಯಾನ್

• ಪ್ರಜೋದಯ ವರದಿ

**ಹಾಸನ:** ನಗರದ ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯಾರಂಭ ಮಾಡಲು ಮಾಸ್ಟರ್ ಪ್ಲ್ಯಾನ್ ರೂಪಿಸಿದ್ದೇವೆ. ಆದ್ಯತೆ ನೀಡಿ ಒಂದು ವರ್ಷದೊಳಗೆ ಸೇವೆ ಒದಗಿಸಲು ಎಲ್ಲಾ ರೀತಿಯ ಪ್ರಯತ್ನ ಮಾಡಲಾಗುವುದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಭರವಸೆ ನೀಡಿದರು.

ಶನಿವಾರ ಅಧಿಕಾರಿಗಳೊಂದಿಗೆ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ವೀಕ್ಷಣೆ ಮಾಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆಸ್ಪತ್ರೆಯಲ್ಲಿ ತುರ್ತು ಚಿಕಿತ್ಸಾ ಘಟಕ (ಟ್ರಾಮಾ ಕೇರ್), ಹೃದಯ ಸಂಬಂಧ ಚಿಕಿತ್ಸಾ ಸೌಲಭ್ಯ ಆರಂಭಿಸಲು 22 ಕೋಟಿ ರೂ. ವೆಚ್ಚದ ಪ್ರಸ್ತಾವನೆ ಸಿದ್ಧಪಡಿಸುತ್ತಿದ್ದೇವೆ. ಅದಕ್ಕಾಗಿ ಬೇಕಾದ ಉಪಕರಣ ಮತ್ತು ನುರಿತ ಸಿಬ್ಬಂದಿ ನೇಮಕಕ್ಕೆ ಪ್ರಸ್ತಾವನೆ ಸಿದ್ಧಪಡಿಸಿ ಕಟ್ಟಡ ಕಾಮಗಾರಿ ಮುಗಿಯುವುದರೊಳಗೆ ಅಂದುಕೊಂಡಿರುವ ಎಲ್ಲಾ ಕೆಲಸ ಮುಗಿಸಲು ಪ್ರಯತ್ನ ಮಾಡುತ್ತಿದ್ದೇವೆಂದು ಹೇಳಿದರು.



2018ರಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಾಮಗಾರಿ ಆರಂಭವಾಗಿ, 2022ರಲ್ಲಿ ಅನುದಾನದ ಕೊರತೆಯಿಂದ ನಿಂತು ಹೋಗಿತ್ತು. ಅದಕ್ಕೆ ಬೇಕಿದ್ದ ಹೆಚ್ಚುವರಿ 9 ಕೋಟಿ ರೂ. ಅನುದಾನ ಬಿಡುಗಡೆಯಾಗಿರಲಿಲ್ಲ. ಹೀಗಾಗಿ ಕಟ್ಟಡ ಅಪೂರ್ಣವಾಗಿತ್ತು. ಹೆಚ್ಚುವರಿ ಅನುದಾನಕ್ಕಾಗಿ ಪ್ರಸ್ತಾವನೆ ಸಲ್ಲಿಸಿದ್ದರೂ ಹಣ ಬಿಡುಗಡೆಯಾಗಿರಲಿಲ್ಲ. ಇತ್ತೀಚೆಗೆ ಜಿಲ್ಲೆಯಲ್ಲಿ ರೋಗಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ, ವೈದ್ಯಕೀಯ ಸಾಮರ್ಥ್ಯ ಹೆಚ್ಚಳ ಮಾಡಬೇಕೆಂದು ಸ್ಥಳೀಯ ಜನಪ್ರತಿನಿಧಿಗಳು, ವಿವಿಧ ಸಂಘ-ಸಂಸ್ಥೆಗಳು ಪ್ರತಿಭಟನೆ ಮಾಡಿ ನನ್ನ ಗಮನಕ್ಕೆ ತಂದಿದ್ದರು. ನಾನು ಉಸ್ತುವಾರಿ ಸಚಿವನಾಗಿ ಬಂದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದ್ದೆ ಎಂದು ತಿಳಿಸಿದರು.

» ನಾಲ್ಕನೇ ಪುಟದಲ್ಲಿ

### ಮತ್ತೆ 22 ಕೋಟಿ ರೂ. ಪ್ರಸ್ತಾವನೆ

ಆಮ್ಲಜನಕ ಲೈನ್, ಎಲೆಕ್ಟ್ರಿಕಲ್ ವರ್ಕ್ಸ್, ಬೆಂಕಿ ಅವಘಡ ತಡೆಯುವ ಉಪಕರಣ, ಮೆಡಿಕಲ್ ಎಮರ್ಜೆನ್ಸಿ ಕಮ್ಯೂನಿಕೇಷನ್ ಸಿಸ್ಟಂ, ಸಿಸಿ ಟಿವಿ, ತುರ್ತು ಚಿಕಿತ್ಸಾ ಘಟಕ, ಲಿಫ್ಟ್ ಅಳವಡಿಸಲು ಇನ್ನೂ 22 ಕೋಟಿ ರೂ. ವೆಚ್ಚದ ಮತ್ತೊಂದು ಪ್ರಸ್ತಾವನೆ ಸಿದ್ಧವಾಗಿದೆ. ಈ ಸಂಬಂಧವೂ ಸಚಿವರೊಂದಿಗೆ ಮಾತನಾಡಿದ್ದು, ಮುಂದಿನ ಒಂದೆರಡು ತಿಂಗಳಲ್ಲಿ ಅನುಮೋದನೆ ನೀಡಿ ಬಿಡುಗಡೆ ಮಾಡಿಸಲಾಗುವುದು. ಬಾಕಿ ಸಿವಿಲ್ ಕಾಮಗಾರಿಗಳು ಪೂರ್ಣಗಳ್ಳಲಿದೆ ಎಂದು ಸಚಿವರು ತಿಳಿಸಿದರು.

# ಸರಳೀಕೃತ ತೆರಿಗೆ: ವಿಕಸಿತ ಭಾರತಕ್ಕೆ ದಿಟ್ಟಹೆಜ್ಜೆ!

ಜನಸಾಮಾನ್ಯರ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿ ಇಟ್ಟುಕೊಂಡು ಹೊಸ ಸರಳೀಕೃತ ಮತ್ತು ಅಗ್ಗದ ತೆರಿಗೆ ವ್ಯವಸ್ಥೆಯನ್ನು ಘೋಷಿಸಿರುವುದು ನಿಜಕ್ಕೂ ಶ್ಲಾಘನೀಯ. ಇದರಿಂದ ಜನಸಾಮಾನ್ಯರು, ಮಧ್ಯಮ ಆದಾಯದ ಕುಟುಂಬಗಳು, ರೈತ ಸಮುದಾಯ, ಸಣ್ಣ ಉದ್ದಿಮೆದಾರರು ಪ್ರಯೋಜನ ಪಡೆಯಲಿದ್ದಾರೆ.

2047ರ ಹೊತ್ತಿಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲುವ ಸಂಕಲ್ಪದೊಂದಿಗೆ ನಮ್ಮ ಕೇಂದ್ರ ಸರಕಾರವು ಕಾಲಕಾಲಕ್ಕೆ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಇದರ ಜತೆಗೆ, 2038ರ ವೇಳೆಗೆ ಅಮೆರಿಕವೂ ಸೇರಿದಂತೆ ಇತರ ದೇಶಗಳನ್ನು ಹಿಂದಿಕ್ಕಿ ಜಗತ್ತಿನ ಎರಡನೆಯ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವಲ್ಲಿನ ತಯಾರಿ ಮತ್ತು ಕಾರ್ಯತಂತ್ರ ಈಗಾಗಲೇ ಜಾರಿಯಲ್ಲಿದೆ.

ದೇಶದ ಸರ್ವತೋಮುಖ ಅಭಿವೃದ್ಧಿ ಮತ್ತು ಜನರ ಖರೀದಿ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ, ಜನಸಾಮಾನ್ಯರಿಗೆ ಅನುಕೂಲವಾಗುವಂತೆ ಬಹುತೇಕ ದಿನಬಳಕೆಯ ವಸ್ತುಗಳ ಮೇಲಿನ ತೆರಿಗೆಯನ್ನು ಕಡಿತಗೊಳಿಸುವ ಮೂಲಕ ನವರಾತ್ರಿಯ ಸಂಭ್ರಮವನ್ನು ಜಿಎಸ್‌ಟಿ ಮಂಡಳಿ ಹೆಚ್ಚಿಸಿದೆ. ಈ ಸರಕು ಮತ್ತು ಸೇವಾ ತೆರಿಗೆಯ ಕಡಿತವನ್ನು ಸ್ವಾತಂತ್ರ್ಯೋತ್ತರ ಭಾರತದ ಅತಿ ದೊಡ್ಡ ಸುಧಾರಣೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ.

ತೆರಿಗೆ ಇಳಿಕೆಯಿಂದಾಗಿ ಸರಕಾರಗಳ ಬೊಕ್ಕಸಕ್ಕೆ 84000 ಕೋಟಿ ರುಪಾಯಿಗಳಷ್ಟು ನಷ್ಟ ಆಗಬಹುದೆಂದು ಅಂದಾಜಿಸಲಾಗಿದ್ದರೂ ಸರಕಾರದ ವಿಶ್ಲೇಷಣೆಗಳ ಪ್ರಕಾರ ಅದು ಸುಮಾರು 48000 ಕೋಟಿಯಾಗಿದೆ. ತಿಂಗಳಿಗೆ ಸರಾಸರಿ 1.55 ಲಕ್ಷ ಕೋಟಿ ರುಪಾಯಿಗಳ ಆದಾಯ ವಿರುವುದರಿಂದ ಮತ್ತು ಜನರ ಹಿತ ಕಾಪಾಡುವ ಧ್ಯೇಯದ ಮುಂದೆ ಇದು ಸಣ್ಣ ಮೊತ್ತ!

ಮುಂದಿನ ದಿನಗಳಲ್ಲಿ ಹೆಚ್ಚಿನ ಪ್ರಮಾಣದ ಖರೀದಿ, ವಹಿವಾಟು ವೃದ್ಧಿಯು ಈ ಮೊತ್ತವನ್ನು ಸರಿದೂಗಿಸಬಹುದು ಎನ್ನುವುದು ಸದ್ಯದ ನಿರೀಕ್ಷೆ. ಒಟ್ಟಿನಲ್ಲಿ ನಿರಂತರ ಬೆಲೆ ಏರಿಕೆ ಮತ್ತು ದಿನಬಳಕೆಯ ವಸ್ತುಗಳ ದುಬಾರಿ ದರಗಳಿಂದ ಹೈರಾಣಾಗಿದ್ದ ದೇಶದ ನಾಗರಿಕರು ಒಂದಷ್ಟು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಈ ನವೀಕೃತ ಮತ್ತು ಕಡಿತಗೊಂಡ/ಶೂನ್ಯಗೊಂಡ ತೆರಿಗೆ ದರಗಳು ನವರಾತ್ರಿಯ ಸಂಭ್ರಮದ ಮೊದಲ ದಿನವಾದ ಇದೇ ಸೆಪ್ಟೆಂಬರ್ 22ರಿಂದ ಜಾರಿಯಾಗಲಿವೆ. ಸ್ವಾತಂತ್ರ್ಯೋತ್ಸವದ ಭಾಷಣದಲ್ಲಿ ಕೆಂಪುಕೋಟೆಯಿಂದ ಮಾತನಾಡುವಾಗ ನರೇಂದ್ರ ಮೋದಿಯವರು, ದೀಪಾವಳಿ ಸಂದರ್ಭದಲ್ಲಿ ಹಲವು ವಸ್ತು ಮತ್ತು ಸೇವೆಗಳ ತೆರಿಗೆ ಇಳಿಸುವ ಸೂಚನೆ ನೀಡಿದ್ದರು.

ಕೇಂದ್ರದ ಬಹುತೇಕ ಯೋಜನೆಗಳನ್ನು ಉದ್ದೇಶಿತ ದಿನಕ್ಕಿಂತ ಮೊದಲೇ ಪೂರ್ಣಗೊಳಿಸಿ ಜನರ ಅನುಕೂಲಕ್ಕೆ ಅನುವುಮಾಡುವ ಪರಿಪಾಠ ಬೆಳೆಸಿಕೊಂಡಿರುವಂತೆ, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ದೀಪಾವಳಿಗಿಂತ ಒಂದು ತಿಂಗಳು ಮೊದಲೇ ತೆರಿಗೆ ಕಡಿತವನ್ನು ಕಾರ್ಯಗತಗೊಳಿಸಿದ್ದಾರೆ!

ಅಲ್ಲಿಗೆ ಸೆಪ್ಟೆಂಬರ್ ಕ್ರಾಂತಿ ನಿಜವಾಗಿದೆ! ಪ್ರಗತಿ ಸ್ನೇಹಿ, ವ್ಯವಹಾರ ಸ್ನೇಹಿ, ಜನಸ್ನೇಹಿ ಮತ್ತು ಪ್ರಕ್ರಿಯೆ ಸ್ನೇಹಿ ಎಂದು ಸದ್ಯದ ಜಿಎಸ್‌ಟಿ-2 ಸುಧಾರಣಾ ಕ್ರಮಗಳು ಕರೆಸಿಕೊಳ್ಳುತ್ತಿವೆ, ಮತ್ತದು ದಿಟವೂ ಹೌದು!

ಮುಂದಿನ ದಿನಗಳಲ್ಲಿ, ದೇಶದ ಆರ್ಥಿಕತೆಯ ವೇಗ ಹೆಚ್ಚಿಸುವಲ್ಲಿ ಇಂಥಾ ಸುಧಾರಣಾ ಕ್ರಮಗಳು ಹೆಚ್ಚಿನ ಪುಷ್ಟಿ ನೀಡಲಿವೆ. ಹಬ್ಬದ ದಿನಗಳಿಂದಲೇ ಈ ಪ್ರಯೋಜನವನ್ನು ಜನರು ಬಳಸುವುದರಿಂದ ಹಬ್ಬದ ಮೆರುಗು ಮತ್ತಷ್ಟು ಹೆಚ್ಚಾಗಲಿದೆ. ತೆರಿಗೆ ಕಡಿತದಿಂದಾಗಿ ಕೃಷಿ, ವೈದ್ಯಕೀಯ ಸೇವೆ,

ತೆರಿಗೆ ಇಳಿಕೆಯಿಂದಾಗಿ ಸರಕಾರಗಳ ಬೊಕ್ಕಸಕ್ಕೆ 84000 ಕೋಟಿ ರುಪಾಯಿಗಳಷ್ಟು ನಷ್ಟ ಆಗಬಹುದೆಂದು ಅಂದಾಜಿಸಲಾಗಿದ್ದರೂ ಸರಕಾರದ ವಿಶ್ಲೇಷಣೆಗಳ ಪ್ರಕಾರ, ಅದು ಸುಮಾರು 48000 ಕೋಟಿಯಾಗಿದೆ. ತಿಂಗಳಿಗೆ ಸರಾಸರಿ 1.55 ಲಕ್ಷ ಕೋಟಿ ರುಪಾಯಿಗಳ ಆದಾಯವಿರುವುದರಿಂದ ಮತ್ತು ಜನರ ಹಿತ ಕಾಪಾಡುವ ಧ್ಯೇಯದ ಮುಂದೆ ಇದು ಸಣ್ಣ ಮೊತ್ತ!

ಇನ್ಸೂರೆ, ಆಟೋಮೊಬೈಲ, ಎಫ್ ಎಂಸಿಜಿ ಉದ್ಯಮಕ್ಕೆ ಹೆಚ್ಚಿನ ಶಕ್ತಿ ಮತ್ತು ವ್ಯವಹಾರ ಬರಲಿದೆ. ಹೀಗೆ ಒದಗಲಿರುವ ತೆರಿಗೆ ಕಡಿತವು ಜನರಿಗೆ ಒಂದಷ್ಟು ಹೆಚ್ಚಿನ ಹಣವನ್ನು ವಿನಿಯೋಗಿಸುವ ಸಾಮರ್ಥ್ಯವನ್ನು ಪರೋಕ್ಷವಾಗಿ ತುಂಬಲಿದೆ- ಅಂದರೆ, ಅದು ಖರೀದಿ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಈ ಎಲ್ಲಾ ಸಕಾರಣಗಳಿಂದಾಗಿ ಮುಂದಿನ ಎರಡು-ಮೂರು ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಶೇ.1ರಿಂದ 1.2 ರಷ್ಟು ಹೆಚ್ಚಾಗಬಹುದೆಂಬುದು ಆರ್ಥಿಕ ವಿಶ್ಲೇಷಕರ ಸದ್ಯದ ಲೆಕ್ಕಾಚಾರ.

ತೆರಿಗೆ ಸುಧಾರಣಾ ಕ್ರಮದ ಭಾಗವಾಗಿ 2017ರ ಜುಲೈ 1ರಿಂದ ದೇಶಾದ್ಯಂತ ಹೊಸ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿಯಾಯಿತು. ಗಬ್ಬರ್ ಸಿಂಗ್ ಟ್ಯಾಕ್ಸ್ ಎಂದು ಈ ವ್ಯವಸ್ಥೆಯನ್ನು ಪ್ರತಿಪಕ್ಷಗಳು ಟೀಕಿಸಿದವು. ಹೊಸತರಲ್ಲಿ ಶೇ.5, ಶೇ.12, ಶೇ.18, ಶೇ. 28, ಹೀಗೆ ನಾಲ್ಕು ಸ್ತರಗಳು ಇದ್ದವು. ದಿನಬಳಕೆಯ ವಸ್ತು ಮತ್ತು ಸೇವೆಗಳಲ್ಲಿ ಹೆಚ್ಚಿನವು ಶೇ.12 ಮತ್ತು ಶೇ.28ರ ಸ್ತರದ ತೆರಿಗೆಯಡಿ ಆರಂಭದ ದಿನಗಳಲ್ಲಿ ಕಾಣಿಸಿಕೊಂಡವು.


ಹೋಟೆಲ್ ತಿಂಡಿಗಳ ಮೇಲೆ ಆರಂಭದ ದಿನಗಳಲ್ಲಿ ಶೇ.18 ತೆರಿಗೆ ಇದ್ದಂತೆ ನೆನಪು ಮತ್ತು ಜನರು ಇಂಥಾ ಅಪಸವ್ಯಗಳಿಂದಾಗಿ ಹೆಚ್ಚು ಮೊತ್ತವನ್ನು ಖರ್ಚು ಮಾಡಬೇಕಾಯಿತು. ಆಗ ನನ್ನನ್ನೂ ಸೇರಿದಂತೆ ಹೆಚ್ಚಿನವರು ಈ ವ್ಯವಸ್ಥೆಯ ಕುರಿತು ಹಿಡಿಶಾಪ ಹಾಕಿದ್ದರು. ತಿಂಗಳುಗಳು ಕಳೆದಂತೆ, ವರ್ಷಗಳು ಕಳೆದಂತೆ ದಿನಬಳಕೆಯ ವಸ್ತು ಮತ್ತು ಸೇವೆಗಳು ಕಡಿಮೆ ತೆರಿಗೆಯ ವ್ಯಾಪ್ತಿಗೆ ಬಂದವು. ಜನರು ಸರಕಾರದ ಈ ನಡೆಯನ್ನು ಸ್ವಾಗತಿಸಲು ಆರಂಭಿಸಿದರು.


ಇನ್ನೂ ಹೆಚ್ಚಿನ ತೆರಿಗೆ ಕಡಿತದ ಕೂಗು ಆಗೀಗ ಬರುತ್ತಿತ್ತು. ಆದರೆ ಹೆಚ್ಚಿನ ರಾಜ್ಯ ಸರಕಾರಗಳು ತಮ್ಮ ಪಾಲಿನ ತೆರಿಗೆ ಆದಾಯಕ್ಕೆ ಕತ್ತರಿ ಬೀಳುವ ಭೀತಿಯಿಂದ ತೆರಿಗೆ ಕಡಿತವನ್ನು ವಿರೋಧಿಸುತ್ತಲೇ ಬಂದವು. ಮೊನ್ನೆ ನಡೆದ ಜಿಎಸ್‌ಟಿ ಕೌನ್ಸಿಲ್ ಸಭೆಯಲ್ಲಿ ಮಹತ್ವದ ನಿರ್ಣಯ ತೆಗೆದು ಕೊಂಡು ಜನರಿಗೆ ಮತ್ತಷ್ಟು ನಿರುಮ್ಮಳ ಭಾವವನ್ನು ಕೊಡಲಾಯಿತು. ಈ ಕ್ರಾಂತಿಕಾರಿ ತೆರಿಗೆ ಇಳಿಕೆಯಿಂದ ಆಗುವ ನಷ್ಟದಲ್ಲಿ ಶೇ.50ರಷ್ಟು ಪಾಲು ರಾಜ್ಯ ಸರಕಾರದ್ದು. ಈ ನಷ್ಟವನ್ನು ಭರಿಸುವ, ಸರಿದೂಗಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಸದ್ಯಕ್ಕೆ ಯಾವುದೇ ಸ್ಪಷ್ಟ ನಿರ್ಧಾರ ಮತ್ತು ನಿರ್ಣಯವನ್ನು ತೆಗೆದುಕೊಂಡಂತೆ ಕಾಣುತ್ತಿಲ್ಲ.

ತಮ್ಮ ಪಾಲಿನ ತೆರಿಗೆ ಆದಾಯದ ಮೊತ್ತವನ್ನು ಕೇಂದ್ರ ಸರಕಾರ ಸರಿಯಾಗಿ ನೀಡುತ್ತಿಲ್ಲ ಎನ್ನುವ ಕೂಗನ್ನು ಎನ್‌ಡಿಎಯೇತರ ರಾಜ್ಯ ಸರಕಾರಗಳು ನಿರಂತರ ಮಾಡುತ್ತಿವೆ. ಈ ತೆರಿಗೆ ಕಡಿತವು ಎಲ್ಲಾ ರಾಜ್ಯ ಸರಕಾರಗಳ ತೆರಿಗೆ ಆದಾಯವನ್ನು ಕಡಿಮೆ ಮಾಡಿರುವುದು ಸದ್ಯಕ್ಕೆ ರಾಜ್ಯ ಸರಕಾರಗಳ ದೊಡ್ಡ ತಲೆನೋವು!

ಮೊದಲ ವರ್ಷಗಳ ಹಲವಾರು ಅಡೆತಡೆ, ಟೀಕೆಗಳ ಹೊರತಾಗಿ ಮತ್ತು ಕಾಲಕಾಲಕ್ಕೆ ನಿರಂತರ ಮತ್ತು ಜನಪರ ದರ ಪರಿಷ್ಕರಣೆ ಮತ್ತು ವಿವಿಧ ಸರಕು ಮತ್ತು ಸೇವೆಗಳ ದರ ಕಡಿತಗೊಳಿಸುವ ಮೂಲಕ ಜಿಎಸ್‌ಟಿ ಸರಳವಾಗುತ್ತ, ಜನಸ್ನೇಹಿಯಾಗಿ ಮಾರ್ಪಾಡಾಗಿದೆ ಎಂದರೆ ಖಂಡಿತ ಅತಿಶಯೋಕ್ತಿಯಲ್ಲ. ಲಭ್ಯ ವಿವರಗಳ ಪ್ರಕಾರ, 2017-18ರಲ್ಲಿ ಸರಾಸರಿ ಜಿಎಸ್‌ಟಿ ದರ ಶೇ.14.4 ರಷ್ಟು ಇತ್ತು. 2019-20ರ ವೇಳೆಗೆ ಅದು ಶೇ.11.6ಕ್ಕೆ ಇಳಿಯಿತು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪ್ರಕಟಿಸಿರುವ ಸಂಶೋಧನಾ ವರದಿಯ ಪ್ರಕಾರ ಜಿಎಸ್‌ಟಿ-2 ಸುಧಾರಣಾ ನೀತಿಯಿಂದಾಗಿ ದೇಶದ ಸರಾಸರಿ ತೆರಿಗೆ ಶೇ.9.5ಕ್ಕೆ ಇಳಿಯಲಿದೆ. ಎಂಟು ವರ್ಷಗಳಲ್ಲಿ ಸರಾಸರಿ ಜಿಎಸ್‌ಟಿ ದರ ಅಂದಾಜು ಶೇ.40ರಷ್ಟು ಕಡಿಮೆಯಾಗಿ ಅಷ್ಟು ಹಣ ಜನರ ಉಳಿತಾಯವಾಗಿದೆ, ವ್ಯಯಿಸುವ ಸಾಮರ್ಥ ವೃದ್ಧಿಸಿದೆ! ಈವರೆಗೆ ನಾಲ್ಕು ಇದ್ದ ತೆರಿಗೆ ಸ್ತರಗಳು ಇನ್ನು ಕೇವಲ ಶೇ.5, ಶೇ,12 ಆಗಿ ಎರಡಕ್ಕಿಳಿಯಲಿವೆ. ಇದನ್ನು ಆತ್ಮನಿರ್ಭರ ಭಾರತದತ್ತ ಮಹತ್ವದ ಹೆಜ್ಜೆ, ಮುಂದಿನ ಪೀಳಿಗೆಯ ಜಿಎಸ್‌ಟಿ, ಎರಡು ಸ್ಲ್ಯಾಬ್ ಕ್ರಾಂತಿ, ಸರಳೀಕೃತ ಅನುಸರಣೆಗಳು ಮತ್ತು ವರ್ಧಿತ ಜಾಗತಿಕ ಸ್ಪರ್ಧಾತ್ಮಕತೆ ಎಂದು ಸರಕಾರ ವ್ಯಾಖ್ಯಾನಿಸಿದೆ.





ಇನ್ನು ಕರ್ನಾಟಕದ ವಿಷಯಕ್ಕೆ ಬರುವುದಾದರೆ, ಜಿಎಸ್‌ಟಿ ಜಾರಿಯ ಬಳಿಕ ರಾಜ್ಯದ ಆದಾಯವು ವಾರ್ಷಿಕ 70000 ಕೋಟಿ ರು.ನಷ್ಟು ಖೋತಾ ಆಗಿದ್ದು ಈ ಹೊಸ ತೆರಿಗೆ ಕಡಿತವು ಹೆಚ್ಚುವರಿಯಾಗಿ 15000 ಕೋಟಿ ರು.ನಷ್ಟು ಆದಾಯ ನಷ್ಟವನ್ನು ಉಂಟು ಮಾಡಲಿದೆ ಎಂಬುದು ರಾಜ್ಯ ಸರಕಾರದ ಕಳವಳ.

ಜಿಎಸ್‌ಟಿಗೂ ಮೊದಲು ಶೇ.13ರಷ್ಟು ಇದ್ದ ರಾಜ್ಯದ ಆದಾಯದ ಪ್ರಗತಿಯು ಜಿಎಸ್‌ಟಿ ಜಾರಿಯಾದ ಬಳಿಕ ಶೇ.11ಕ್ಕೆ ಇಳಿದಿದೆ ಎಂದು ಅಂಕಿ-ಅಂಶಗಳು ಹೇಳುತ್ತಿವೆ. 2016-17ರಿಂದ 2024-25ಕ್ಕೆ ಹೋಲಿಸಿದಾಗ ಕೇಂದ್ರದಿಂದ ತೆರಿಗೆ ಹಂಚಿಕೆಯಲ್ಲಿ ವಾರ್ಷಿಕವಾಗಿ ಕರ್ನಾಟಕಕ್ಕೆ 21,197 ಕೋಟಿ ರುಪಾಯಿಗಳಷ್ಟು ಕಡಿತವಾಗಿದೆ.

ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಪರದಾಡುತ್ತಿರುವ ಈ ಸಂದರ್ಭದಲ್ಲಿ ಹೀಗೆ ಉಂಟಾದ ತೆರಿಗೆ ನಷ್ಟವು ಗಾಯದ ಮೇಲಿನ ಬರೆಯೇ ಸರಿ. ಈಗ ಘೋಷಿಸಿರುವ ತೆರಿಗೆ ಕಡಿತವು ರಾಜ್ಯದ ಆದಾಯದ ಪಾಲಿಗೆ ಮತ್ತಷ್ಟು ಹೊಡೆದ ನೀಡಲಿದೆ.

ಮುಂದೆ ಆಗಬೇಕಾಗಿರುವುದು ಏನು?: ತೆರಿಗೆಯ ಒಟ್ಟು ಆದಾಯ ಸಂಗ್ರಹದ ಪ್ರಮಾಣದಲ್ಲಿ ರಾಜ್ಯಗಳಿಗೆ ತೆರಿಗೆಯ ಹಣವನ್ನು ಕೇಂದ್ರ ಸರಕಾರ ಬಿಡುಗಡೆ ಮಾಡುತ್ತಿಲ್ಲ ಎನ್ನುವುದು ದಕ್ಷಿಣದ ಬಹುತೇಕ ರಾಜ್ಯಗಳ ಅಳಲು. ನಮ್ಮಿಂದ ಜಿಎಸ್‌ಟಿ ರೂಪದಲ್ಲಿ ಹಣ ಸಂಗ್ರಹಿಸಿ ಬಹುಪಾಲು ಉತ್ತರದ ರಾಜ್ಯಗಳಿಗೆ ವಿನಿಯೋಗ ಮಾಡಲಾಗುತ್ತಿದೆ. ಕೇಂದ್ರದ ತಾರತಮ್ಯ ನೀತಿಯ ವಿರುದ್ಧ ನಮ್ಮ ತೆರಿಗೆ ನಮ್ಮ ಹಕ್ಕು ಮುಂತಾದ ಹೆಸರಿನಲ್ಲಿ ಕರ್ನಾಟಕ ಸರಕಾರ ಪ್ರತಿಭಟಿಸುತ್ತಾ, ವಿವಿಧ ವೇದಿಕೆಗಳಲ್ಲಿ ಧ್ವನಿ ಎತ್ತುತ್ತಾ ಬಂದಿದೆ. ಹೌದು ಈ ವಿಚಾರದಲ್ಲಿ ಕೇಂದ್ರ ಸರಕಾರ ವಿವರವಾದ, ಸ್ಪಷ್ಟ ಮತ್ತು ಎಲ್ಲರಿಗೂ ಸಲ್ಲುವ ತೆರಿಗೆ ಮೊತ್ತ ವಿತರಣೆಯ, ಬಹುತೇಕ ರಾಜ್ಯಗಳು ಒಪ್ಪುವ ಮಾನದಂಡವನ್ನು ಪ್ರಕಟಿಸಿ ಜಾರಿಗೆ ತರಬೇಕಿದೆ.

ಸದ್ಯದ ಜಿಎಸ್‌ಟಿ ಸರಳೀಕರಣದಿಂದ ರಾಜ್ಯ ಸರಕಾರಗಳಿಗೆ ಆಗುವ ಆದಾಯದ ನಷ್ಟವನ್ನು ಯಾವ ರೀತಿಯಲ್ಲಿ ಮತ್ತು ಯಾವ್ಯಾವ ಮೂಲಗಳಿಂದ ಸರಿದೂಗಿಸಬಹುದು ಎಂಬುದರ ಕುರಿತು ಕೇಂದ್ರ ಸರಕಾರ ಯಾವುದೇ ಮಾಹಿತಿಯನ್ನು ನೀಡಲಿಲ್ಲ. ನೇರ ತೆರಿಗೆ, ಆದಾಯ ತೆರಿಗೆ, ಡಿವಿಡೆಂಡ್, ಕಸ್ಟಮ್ಸ್ ಮತ್ತು ನಾನಾ ರೂಪದ ಸೆಸ್ ಗಳು ಕೇಂದ್ರದ ಪ್ರಮುಖ ಆದಾಯದ ಮೂಲಗಳು. ರಾಜ್ಯಗಳು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಬೇಕಾದ ಆದಾಯವನ್ನು ಸಂಗ್ರಹಿಸಲು ಹೆಚ್ಚಿನ ಪ್ರಮಾಣದಲ್ಲಿ ಜಿಎಸ್‌ಟಿ ಆದಾಯವನ್ನೇ ನೆಚ್ಚಿಕೊಂಡಿವೆ. ನಿರೀಕ್ಷಿತ ಆದಾಯವನ್ನು ಕೇಂದ್ರ ಕೊಡದಿರುವುದು ಒಂದೆಡೆಯಾದರೆ, ಈಗ ಸರಳೀಕೃತ ತೆರಿಗೆಯು ರಾಜ್ಯಗಳ ತೆರಿಗೆ ಆದಾಯವು ಮತ್ತಷ್ಟು ಕುಸಿಯುವಂತೆ ಮಾಡಲಿದೆ.

ಹೀಗೆ ಆದಾಯ ನಷ್ಟವಾದರೆ ರಾಜ್ಯಗಳ ಆರ್ಥಿಕ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಕಸಿದಂತಾಗಲಿದೆ. ಜಿಎಸ್‌ಟಿ ವ್ಯವಸ್ಥೆಯು ಆರ್ಥಿಕ ಚಟುವಟಿಕೆಗಳನ್ನು ಮತ್ತಷ್ಟು ಪ್ರೋತ್ಸಾಹಿಸಿ ಕೇಂದ್ರ ಮತ್ತು ರಾಜ್ಯಗಳ ಆದಾಯವನ್ನು ದ್ವಿಗುಣಗೊಳಿಸುವ ಗುರಿಯಾಗಿತ್ತು. ಕೇಂದ್ರದ ಆದಾಯ ವೇನೋ ಗಣನೀಯವಾಗಿ ಹೆಚ್ಚಿದೆ, ಆದರೆ ಅದರ ನಿರೀಕ್ಷಿತ ಪಾಲು ಕರ್ನಾಟದಂಥ ರಾಜ್ಯಗಳಿಗೆ ಸಿಗುತ್ತಿಲ್ಲ ಎನ್ನುವುದು ಆರೋಪ. ಕೇಂದ್ರವು ಈ ನಿಟ್ಟಿನಲ್ಲಿ ಪಾರದರ್ಶಕ ಸುಧಾರಣಾ ಕ್ರಮಗಳನ್ನು ಕೈಗೊಳ್ಳಬೇಕಿದೆ.

ಬದಲಾವಣೆ ಜಗದ ನಿಯಮ. ಜನಸಾಮಾನ್ಯರ ಕ್ಷೇಮಾಭಿವೃದ್ಧಿಯನ್ನು ಗಮನದಲ್ಲಿ ಇಟ್ಟು ಕೊಂಡು ಈ ಹೊಸ ಸರಳೀಕೃತ ಮತ್ತು ಅಗ್ಗದ ತೆರಿಗೆ ವ್ಯವಸ್ಥೆಯನ್ನು ಘೋಷಿಸಿರುವುದು ನಿಜಕ್ಕೂ ಶ್ಲಾಘನೀಯ. ಇದರಿಂದ ಜನಸಾಮಾನ್ಯರು, ಮಧ್ಯಮ ಆದಾಯದ ಕುಟುಂಬಗಳು, ರೈತ ಸಮುದಾಯ, ಸಣ್ಣ ಉದ್ದಿಮೆದಾರರು ಪ್ರಯೋಜನ ಪಡೆಯಲಿದ್ದಾರೆ.

ತಿಂಗಳ ಆದಾಯದಲ್ಲಿ ಖರ್ಚು ಮಾಡುವ ಹಣವು ತೆರಿಗೆ ಕಡಿತದಿಂದ ಒಂದಷ್ಟು ಇಳಿದು ಆ ಹಣವು ಉಳಿತಾಯವಾಗಿ ಅಥವಾ ಮತ್ಯಾವುದಕ್ಕೋ ಖರ್ಚಾಗಲಿರುವುದು ಖಂಡಿತ. ಎರಡೂ ಪ್ರಕಾರಗಳು ದೇಶದ ಆರ್ಥಿಕತೆಗೆ ಮತ್ತಷ್ಟು ಬಲ ನೀಡಲಿವೆ. ಭಾರತವು ಮುಂದಿನ ದಿನಗಳಲ್ಲಿ ಬೃಹತ್ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವುದು ನಿಸ್ಸಂಶಯ.

ಆದಾಯ ತೆರಿಗೆಯಲ್ಲಿ ಕಡಿತ, ಫಾಸ್ಟ್ಯಾಗ್ ವಾರ್ಷಿಕ ಪಾಸ್ ಮೂಲಕ ಟೋಲ್ ಪಾವತಿಯಲ್ಲಿ ಉಳಿತಾಯ, ಈಗ ತೆರಿಗೆ ಕಡಿತ- ಹೀಗೆ ಹಲವು ಜನಪರ ಯೋಜನೆಗಳು ಕಳೆದ ಕೆಲವು ತಿಂಗಳುಗಳಲ್ಲಿ ಜಾರಿಯಾಗಿವೆ. ಜನಪರ, ಜನೋಪಯೋಗಿ ಮತ್ತು ಜನರಿಗೆ ಅನುಕೂಲವಾಗುವ ಯೋಜನೆಗಳನ್ನು ತರಲು ಚುನಾವಣೆಗಳು ಬರಬೇಕಿಲ್ಲ ಎನ್ನುವುದನ್ನು ಈಗಿನ ಕೇಂದ್ರ ಸರಕಾರ ಹಲವಾರು ಬಾರಿ ಸಾಬೀತುಪಡಿಸಿದೆ!

ಜಿಎಸ್‌ಟಿ ಕಡಿತದ ಪಾಲು ನೇರವಾಗಿ ಜನಸಾಮಾನ್ಯರಿಗೆ ಸಿಗುವಂತಾದಾಗ ಮಾತ್ರ ಇಂಥ ಸುಧಾರಣಾ ಕ್ರಮಗಳು ಯಶಸ್ವಿಯಾಗಿವೆ. ಹಾಗಾಗಲಿ ಎಂಬುದು ಸರ್ವರ ಆಶಯ.

**- ರವೀ** ಸಜಂಗದ್ದೆ

## 07-9-2025 ದಿನ ಭವಿಷ್ಯ

**ಮೇಷ:** ನಿಮ್ಮ ಶೀಘ್ರ ಕ್ರಮ ನಿಮ್ಮನ್ನು ಪ್ರೇರೇಪಿಸುತ್ತದೆ. ಯಶಸ್ಸು ಸಾಧಿಸಲು-ಸಮಯದ ಜೊತೆ ನಿಮ್ಮ ಆಲೋಚನೆಗಳನ್ನು ಬದಲಾಯಿಸಿಕೊಳ್ಳಿ-ಇದು ನಿಮ್ಮ ದೃಷ್ಟಿಯನ್ನು ವಿಸ್ತಾರಗೊಳಿಸುತ್ತದೆ ನಿಮ್ಮ ವ್ಯಕ್ತಿತ್ವವನ್ನು ವೃದ್ಧಿಸುತ್ತದೆ-ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸುತ್ತದೆ ಮತ್ತು ನಿಮ್ಮ ಮನಸ್ಸನ್ನು ಪಕ್ವಗೊಳಿಸುತ್ತದೆ. ನೀವು ಯಾವುದೇ ದೊಡ್ಡ ಸಮಸ್ಯೆಯಿಂದ ಹೊರಬರಬಹುದು.

**ವೃಷಭ:** ಅನಂತ ಜೀವನದ ಉತ್ಕೃಷ್ಟ ವೈಭವವನ್ನು ಆನಂದಿಸಲು ನಿಮ್ಮ ಜೀವನವನ್ನು ಹೆಚ್ಚು ಭವ್ಯಗೊಳಿಸಿ. ಚಿಂತೆಯ ಅನುಪಸ್ಥಿತಿ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆ. ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ನಿಮ್ಮ ಸಂಗಾತಿಯ ಆರೋಗ್ಯದ ಚಿಂತೆ ಉಂಟುಮಾಡಬಹುದು.

**ಮಿಥುನ:** ಅಸಾಧ್ಯವಾದ ಅನಗತ್ಯ ಚಿಂತನೆಯಲ್ಲಿ ನಿಮ್ಮ ಶಕ್ತಿ ವ್ಯರ್ಥ ಮಾಡುವ ಬದಲು ಅದನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ. ಇಂದು ಹಣದ ಪ್ರಯೋಜನವನ್ನು ಪಡೆಯುವ ಸಾಧ್ಯತೆ ಇದೆ ಆದರೆ ನಿಮ್ಮ ಕೋಪದ ಸ್ವಭಾವದಿಂದ ಇಂದು ಹಣವನ್ನು ಗಳಿಸುವಲ್ಲಿ ಸಾಧ್ಯವಾಗದಿರಬಹುದು. ನಿಮ್ಮ ಜೊತೆಗಿರುವ ನಿಮ್ಮೊಂದಿಗೆ ಬಹಳ ಸಂತೋಷದಿಂದಿರುವುದಿಲ್ಲ.

**ಕರ್ಕಾಟಕ:** ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ನಿಯಮಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ನೀವು ನಿಮ್ಮ ತಂತ್ರಗಳನ್ನು ಅಳವಡಿಸಿದಲ್ಲಿ ಇಂದು ಸ್ವಲ್ಪ ಹೆಚ್ಚುವರಿ ಹಣ ಸಂಪಾದಿಸುತ್ತೀರಿ. ನಿಮ್ಮ ಸಂಗಾತಿಯ ಜೊತೆ ಹೊರಹೋಗುವಾಗ ಸಭ್ಯತೆಯಿಂದ ವರ್ತಿಸಿ. ಇಂದು ನಿಮ್ಮ ಹತ್ತಿರ ಸಾಕಷ್ಟು ಸಮಯ ಉಳಿದಿರುವ ಸಾಧ್ಯತೆ ಇದೆ.

**ಸಿಂಹ:** ಅತ್ಯಂತ ಪ್ರಭಾವಿ ಜನರ ಬೆಂಬಲ ನಿಮ್ಮ ನೈತಿಕ ಸ್ಥೈರ್ಯವನ್ನು ಹೆಚ್ಚಿಸುತ್ತದೆ. ಇತರರ ಮೇಲೆ ಪ್ರಭಾವ ಬೀರಲು ತುಂಬಾ ವೆಚ್ಚ ಮಾಡಬೇಡಿ. ಮಕ್ಕಳ ಅವರ ಸಾಧನೆಗಳಿಂದ ನೀವು ಹೆಮ್ಮೆ ಪಡುವಂತೆ ಮಾಡಬಹುದು. ನಿಮ್ಮ ಪ್ರೇಮಿಯಿಂದ ದೂರ ವುಳಿಯಲು ತುಂಬಾ ಕಷ್ಟವಾಗುತ್ತದೆ. ಇಂದು ನೀವು ವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು.

**ಕನ್ಯಾ:** ಸಂತೃಪ್ತಿಯ ಜೀವನಕ್ಕಾಗಿ ನಿಮ್ಮ ಮಾನಸಿಕ ದೃಢತೆಯನ್ನು ಸುಧಾರಿಸಿ. ಇಂದು ಯಾವುದೇ ವಿರುದ್ಧ ಲಿಂಗದ ಸಹಾಯದಿಂದ ನೀವು ವ್ಯಾಪರ ಅಥವಾ ಉದ್ಯೋಗದಲ್ಲಿ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಇದೆ. ಸಮುದ್ರದಾಚೆಯ ಸಂಬಂಧಿಯಿಂದ ಒಂದು ಉಡುಗೊರೆ ನಿಮ್ಮನ್ನು ಸಂತೋಷಪಡಿಸುತ್ತದೆ. ನಿಮ್ಮ ಗೆಳತಿಯ ಜೊತೆ ಅಸಭ್ಯವಾಗಿ ನಡೆದುಕೊಳ್ಳಬೇಡಿ.

**ತುಲಾ:** ಅತಿಯಾಗಿ ತಿನ್ನುವುದು ಮತ್ತು ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಬೇಕು. ನೀವು ಉಳಿಸಿರುವ ಹಣ ಇಂದು ನಿಮ್ಮ ಕೆಲಸಕ್ಕೆ ಬರಬಹುದು. ಇದರೊಂದಿಗೆ ಇದರ ಹೋಗುವ ದುಃಖವು ನಿಮಗೆ ಆಗುತ್ತದೆ. ಹಿರಿಯರ ಬಳಿ ನಿಮ್ಮ ಮಹತ್ವಾಕಾಂಕ್ಷೆಗಳನ್ನು ವ್ಯಕ್ತಪಡಿಸಿ.

**ವೃಶ್ಚಿಕ:** ನೀವು ನಿಮ್ಮ ಭಾವನೆಗಳನ್ನು ನಿಯಂತ್ರಿಸಬೇಕು ಮತ್ತು ನಿಮ್ಮ ಭಯವನ್ನು ಸಾಧ್ಯವಾದಷ್ಟೂ ಬೇಗ ತೊಡೆದುಹಾಕಬೇಕು ಏಕೆಂದರೆ ಇವು ತಕ್ಷಣವೇ ನಿಮ್ಮ ಆರೋಗ್ಯವನ್ನು ಬಾಧಿಸಬಹುದು ಮತ್ತು ಒಳ್ಳೆಯ ಆರೋಗ್ಯವನ್ನು ಅನುಭವಿಸುವ ನಿಮ್ಮ ಹಾದಿಯಲ್ಲಿ ಅಡ್ಡ ಬರಬಹುದು.

**ಧನು:** ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ಆರ್ಥಿಕ ದೃಷ್ಟಿಯಿಂದ ಇಂದಿನ ದಿನ ಮಿಶ್ರವಾಗಿ ಉಳಿಯುತ್ತದೆ. ಇಂದು ನೀವು ಹಣದ ಪ್ರಯೋಜನವನ್ನು ಪಡೆಯಬಹುದು ಆದರೆ ಇದಕ್ಕಾಗಿ ನೀವು ಕಠಿಣ ಪರಿಶ್ರಮ ಮಾಡಬೇಕಾಗುತ್ತದೆ.

**ಮಕರ:** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ವಿಶ್ವಾಸರಾಹಿತ್ಯ ಅಹಂಭಾವ ಮತ್ತು ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ, ಹಣದ ಕಳ್ಳತನವಾಗುವ ಸಾಧ್ಯತೆ ಇದೆ.

**ಕುಂಭ:** ವಿಶೇಷವಾಗಿ ಹೃದಯ ರೋಗಿಗಳು ಕಾಫಿಯನ್ನು ಬಿಡಬೇಕು. ದಿನದಲ್ಲಿ ನಂತರ ಹಣಕಾಸು ಪರಿಸ್ಥಿತಿಗಳು ಸುಧಾರಿಸುತ್ತವೆ. ನಿಮ್ಮ ಹಠಮಾರಿ ಪ್ರಕೃತಿ ನಿಮ್ಮ ಪೋಷಕರ ಶಾಂತಿಯನ್ನು ಹಾಳು ಮಾಡಬಹುದು. ನೀವು ಅವರ ಸಲಹೆಯನ್ನು ಪಾಲಿಸಬೇಕು. ಅವರಿಗೆ ನೋವುಂಟುಮಾಡದಿರಲು ಆಜ್ಞಾಧಾರಕರಾಗಿರುವುದು ಒಳ್ಳೆಯದು.

**ಮೀನ:** ಇತ್ತೀಚಿಗೆ ನಿಮಗೆ ಹತಾಶೆಯೆನಿಸುತ್ತಿದ್ದಲ್ಲಿ ಇಂದು ಸರಿಯಾದ ಆಲೋಚನೆಗಳು ಹಾಗೂ ಕಾರ್ಯಗಳು ನಿಮಗೆ ಅಗತ್ಯವಿರುವ ಸಮಾಧಾನವನ್ನು ತರುತ್ತವೆ ಎಂದು ನೀವು ನೆನಪಿಡಬೇಕು. ಇಂದು ಸಾಲಗಾರನು ನಿಮ್ಮ ಮನೆ ಬಾಗಿಲಿಗೆ ಬರಬಹುದು ಮತ್ತು ನಿಮ್ಮ ಹತ್ತಿರ ಸಾಲ ಕೇಳಬಹುದು. ಅವರಿಗೆ ಹಣವನ್ನು ಹಿಂದಿರುಗಿಸಿ ನೀವು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಬಹುದು.

# ಹಳ್ಳ ಹಿಡಿದಿರುವ ನಿವೃತ್ತರ ಬದುಕು: ಕೇಳುವವರು ಯಾರು?



ಪಿಂಚಣಿ ವ್ಯವಸ್ಥೆಯಲ್ಲಿನ ಲೋಪದೋಷಗಳು, ಪಿಂಚಣಿಯ ಉನ್ನತೀಕರಣ ಮುಂತಾದ ವಿಷಯಗಳಿಗೆ ಸಂಬಂಧಿಸಿ ಪಿಂಚಣಿದಾರರು ನ್ಯಾಯಾಲಯದಲ್ಲಿ ಸುದೀರ್ಘ ಅವಧಿಯವರೆಗೆ ಹೋರಾಡುವುದನ್ನು ತಪ್ಪಿಸಲು ರಾಜ್ಯಸಭಾ ಸದಸ್ಯ ಸಂಜಯ್ ರಾವತ್ ಅವರು ಸರಕಾರದ ಮುಂದೆ ಒಂದಿಷ್ಟು ಬೇಡಿಕೆಗಳನ್ನು ಇರಿಸಿದ್ದಾರೆ. ಸರಕಾರವು ಅವುಗಳತ್ತ ಕಣ್ಣು ಹಾಯಿಸುವುದೇ?

ಎಲ್ಲಾ ನಿವೃತ್ತರನ್ನು, ಹಿರಿಯ ನಾಗರಿಕರನ್ನು ಕೊಂದುಬಿಡಿ. 65 ವರ್ಷ ಆದವರೆಲ್ಲರನ್ನೂ ಸಾಯಿಸಿ ಬಿಡಿ- ಹೀಗೆಂದು ಶಿವಸೇನೆಯ (ಉದ್ಧವ್ ಠಾಕ್ರೆ ಬಣ) ರಾಜ್ಯಸಭಾ ಸದಸ್ಯ ಸಂಜಯ್ ರಾವತ್ ಅವರು ಇತ್ತೀಚೆಗೆ ಅತೀವ ಆಕ್ರೋಶ ಮತ್ತು ವ್ಯಾಕುಲದಿಂದ ಸದನದಲ್ಲಿ ಕೂಗಾಡಿದರಂತೆ. ನಿವೃತ್ತರು ದಿನನಿತ್ಯದ ಬದುಕಿನಲ್ಲಿ ಅನುಭವಿಸುವ ಅವಮಾನ, ನಿರ್ಲಕ್ಷ್ಯ, ಏಕಾಂಗಿತನ, ಆರ್ಥಿಕ ಸಂಕಷ್ಟ ಮತ್ತು ಹೀನಾಯ ಸ್ಥಿತಿಯನ್ನು ಅವರು ಮನಮಿಡಿಯುವಂತೆ ವಿಸ್ತೃತವಾಗಿ ಬಿಚ್ಚಿಟ್ಟರಂತೆ. ಅವರು ಸದನದಲ್ಲಿ ಮಾಡಿದ ಈ ಭಾಷಣವು ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿ, ಭಾರಿ ಲೈಕ್‌ಗಳನ್ನು ಪಡೆಯುತ್ತಿದೆ ಎನ್ನಲಾಗುತ್ತಿದೆ.

ಸಂಜಯ್ ರಾವತ್ ಅವರು ಬಳಸಿದ ಕೊಂದುಬಿಡಿ ಮತ್ತು ಸಾಯಿಸಿಬಿಡಿ ಎಂಬ ಆಕ್ರೋಶದ ನುಡಿಗಳು ಸರಕಾರದ ಕಣ್ಣು ತೆರೆಸಬೇಕು. ಸಮಾಜವಾದಿ ಪಕ್ಷದ ಸದಸ್ಯೆ ಜಯಾ ಬಚ್ಚನ್ ಕೂಡ ವರ್ಷದ ಹಿಂದೆ ಸದನದಲ್ಲಿ ಹೀಗೇ ಕೂಗಾಡಿದ್ದರು. ನಿವೃತ್ತರ ಬವಣೆಯು ಬಡವಾ ನೀ ಮಡಗಿದಂತೆ ಇರು ಎಂಬ ರೀತಿಯಲ್ಲಿ ಮುಂದುವರಿದಿದೆ.

ಕೇರಳ ಸರಕಾರವು ಹಿರಿಯ ನಾಗರಿಕರ ಆಯೋಗ ರಚಿಸಿ, ಅವರ ಸಮಸ್ಯೆಗಳತ್ತ ಗಮನ ಹರಿಸಲು ಮುಂದಾಗಿದೆ; ಆದರೆ ದೇಶದ ಬೇರಾವ ರಾಜ್ಯವಾಗಲೀ ಅಥವಾ ಕೇಂದ್ರ ಸರಕಾರವಾಗಲೀ ಈ ನಿಟ್ಟಿನಲ್ಲಿ ಗಮನಹರಿಸಿದ ಮಾಹಿತಿಯಿಲ್ಲ.

ಈ ನಿವೃತ್ತರು ಅಥವಾ ಹಿರಿಯ ನಾಗರಿಕರು ದೇಶವನ್ನು ಕಟ್ಟಿದವರು. ತಮ್ಮ ಸೇವಾವಧಿ ಮುಗಿದು ನಿವೃತ್ತರಾದ ನಂತರ ದೊರಕುವ ಕಾಟಾಚಾರದ ಪಿಂಚಣಿಯಲ್ಲಿ (ಹಲವರಿಗೆ ಆ ಭಾಗ್ಯವೂ ಇಲ್ಲ) ಅಥವಾ ಸೇವಾವಧಿಯಲ್ಲಿ ಹೊಟ್ಟೆ-ಬಟ್ಟೆ ಕಟ್ಟಿ ಉಳಿಸಿದ ಹಣವನ್ನು ಬ್ಯಾಂಕಿನಲ್ಲಿ ಇಟ್ಟು, ಅದರಿಂದ ದೊರಕುವ ಬಡ್ಡಿಯಲ್ಲಿ ಬದುಕಿನ ಬಂಡಿಯನ್ನು ಓಡಿಸುವವರು. ಈ ಪೈಕಿ ಅದೆಷ್ಟೋ ಜನ ವೃದ್ಧಾಶ್ರಮದಲ್ಲಿ ಆಶ್ರಯ ಪಡೆದಿದ್ದಾರೆ.

ಇತ್ತೀಚೆಗೆ ವೃದ್ಧಾಶ್ರಮಗಳ ಮತ್ತು ಹಿರಿಯ ನಾಗರಿಕರ ವಸತಿಗೃಹಗಳ ಸಂಖ್ಯೆಯು ಹೆಚ್ಚುತ್ತಿರುವುದು ಕಟುಸತ್ಯ. ಹಲವು ಹಿರಿಯ ಜೀವಗಳು ತಮ್ಮ ಮಕ್ಕಳಿಂದ ಒದಗುವ ಅವಮಾನ/ನಿರ್ಲಕ್ಷ್ಯದ ಹೊರತಾಗಿಯೂ, ಏನೂ ನಡೆದಿಲ್ಲವೆಂಬಂತೆ ಮುಖವಾಡ ಹಾಕಿಕೊಂಡು, ಕೊನೆಯ ದಿನಗಳನ್ನು ನಿರೀಕ್ಷಿಸುತ್ತಾ, ನಮ್ಮನ್ನು ನಿನ್ನ ಪಾದದಲ್ಲಿ ಬೇಗನೆ ಸೇರಿಸಿಕೋ ಎಂದು ದೇವರನ್ನು ಬೇಡುತ್ತಾ ಕಾಲ ಕಳೆಯುತ್ತಾರೆ.

ಹಾಗೆಂದ ಮಾತ್ರಕ್ಕೆ, ತಮ್ಮ ಮಕ್ಕಳು-ಮೊಮ್ಮಕ್ಕಳೊಂದಿಗೆ ಸುಖವಾಗಿ ಕಾಲ ಕಳೆಯುತ್ತಿರುವ ವಯೋವೃದ್ಧರು ಇಲ್ಲವೇ ಇಲ್ಲ ಎಂದೇನಲ್ಲ; ಆದರೆ ವರದಿಗಳ ಪ್ರಕಾರ ಇಂಥವರ ಸಂಖ್ಯೆ ಹೇಳಿಕೊಳ್ಳುವಷ್ಟು ಹೆಚ್ಚೇನೂ ಇಲ್ಲ. ನಿವೃತ್ತರ ಪಿಂಚಣಿ ವ್ಯವಸ್ಥೆಯಲ್ಲೂ ಬದಲಾವಣೆಯಾಗಿದ್ದು, ಎನ್‌ಪಿಎಸ್ /ಯುಪಿಎಸ್ ಹೆಸರಿನಲ್ಲಿ ಮೊದಲಿನಂತೆ ನಿರ್ದಿಷ್ಟ ಪಿಂಚಣಿ ಇಲ್ಲದಂತಾಗಿದೆ. ಹೀಗಾಗಿ ಎಲ್ಲವೂ ಗೊಂದಲಮಯವಾಗಿದೆ, ಹಿರಿಯ ನಾಗರಿಕರ ಬದುಕು ಹೈರಾಣಾಗಿದೆ.

ಇತ್ತೀಚೆಗೆ ಜಾರಿ ಮಾಡಲು ಉದ್ದೇಶಿಸಿರುವ ಯುಪಿಎಸ್ ಪಿಂಚಣಿ ವ್ಯವಸ್ಥೆಗೆ ಸ್ಪಂದನೆಯೇ ಇಲ್ಲ ಎನ್ನಲಾಗುತ್ತದೆ. ಹಿರಿಯ ನಾಗರಿಕರಿಗೆ ಅಮರಿಕೊಳ್ಳುವ ಅನಾರೋಗ್ಯದ ಸಮಸ್ಯೆ ಎಲ್ಲರಿಗೂ ತಿಳಿದ ವಿಷಯವೇ. 70 ವರ್ಷ ಆದವರಿಗೆ ಆರೋಗ್ಯವಿಮೆ ಭಾಗ್ಯವಿಲ್ಲ, ಅಕಸ್ಮಾತ್ ಇದ್ದರೂ ಹಲವು ಷರತ್ತುಗಳಿಗೆ ಅದು ಒಳಪಟ್ಟಿರುತ್ತದೆ. ಅವರು ಯಾವುದೇ ಸಾಲಕ್ಕೆ ಅರ್ಹರಿರುವುದಿಲ್ಲ, ವಾಹನ ಚಾಲನಾ ಪರವಾನಗಿ/ಅನುಮತಿಯನ್ನು ಪಡೆಯಲಾಗುವುದಿಲ್ಲ.

ಅವರಿಗೆ ಯಾರೂ ಉದ್ಯೋಗವನ್ನು ನೀಡುವುದಿಲ್ಲವಾದ್ದರಿಂದ, ಬದುಕಿನ ಬಂಡಿಯನ್ನು ಎಳೆಯಲು ಅವರು ಇನ್ನೊಬ್ಬರ ಮೇಲೆ ಅವಲಂಬಿತರಾಗಬೇಕಾಗುತ್ತದೆ. ಅವರು ತಮ್ಮ ಸೇವಾವಧಿ ಪೂರ್ತ (60-65 ವರ್ಷದವರೆಗೆ) ಸರಕಾರಕ್ಕೆ ತೆರಿಗೆಯನ್ನೂ, ಆರೋಗ್ಯ-ಜೀವವಿಮಾ ಪ್ರೀಮಿಯಂ ಅನ್ನೂ ಕಟ್ಟಿರುತ್ತಾರೆ; ಆದರೂ ನಿವೃತ್ತಿಯ ನಂತರವೂ ಅವರು ಎಲ್ಲಾ ರೀತಿಯ ತೆರಿಗೆಯನ್ನು ನೀಡಬೇಕು.

ವಿಶೇಷವೆಂದರೆ, ಜೀವನರಥ ಓಡಿಸಲೆಂದು ನೀಡಲಾಗುವ ಅಲ್ಪಮೊತ್ತದ ಪಿಂಚಣಿಗೂ ತೆರಿಗೆ ನೀಡಬೇಕು. ಹೀಗಾಗಿ ಇದು ಸಂಬಳವಲ್ಲ, ಬದುಕಲು ನೀಡುವ ಜೀವನಾಂಶ. ಇದಕ್ಕೂ ತೆರಿಗೆಯೇ? ಎಂದು ಹಲವು ವಯೋವೃದ್ಧರು ಕೇಳುತ್ತಿದ್ದಾರೆ.

ನಿವೃತ್ತರಿಗೆಂದು ಯಾವುದೇ ರೀತಿಯ ವಿನಾಯಿತಿ ಅಥವಾ ಸ್ಕೀಮ್‌ಗಳು ಇಲ್ಲ. ಬ್ಯಾಂಕ್ ಠೇವಣಿ ಮೇಲಿನ ಬಡ್ಡಿದರವು ಇಳಿಯುತ್ತಿರುವುದರಿಂದ ಅವರ ಆದಾಯದಲ್ಲಿ ಕುಸಿತವಾಗುತ್ತಿದೆ. ಬಾಗಿದ ಬೆನ್ನಿನ ಮೇಲೆ ಇನ್ನೊಂದು ಗುದ್ದು ಎನ್ನುವಂತೆ ಈ ಬಡ್ಡಿ ಆದಾಯಕ್ಕೆ ತೆರಿಗೆ ಬೇರೆ!

ಒಂದು ಕಾಲಕ್ಕೆ, ಹಿರಿಯರು ಇರಿಸುವ ಠೇವಣಿ ಮೇಲೆ ಶೇ.1ರಷ್ಟು ಹೆಚ್ಚುವರಿ ಬಡ್ಡಿ ನೀಡಲಾಗುತ್ತಿತ್ತು, ಅದನ್ನೀಗ ಶೇ.0.50ಕ್ಕೆ ಇಳಿಸಲಾಗಿದೆ. ಸರಕಾರವು ಜನಕಲ್ಯಾಣಕ್ಕಾಗಿ ಸಾಕಷ್ಟು ಅನುದಾನವನ್ನು ನೀಡುತ್ತದೆ. ಆದರೆ ಹಿರಿಯ ನಾಗರಿಕರಿಗೆ ಸಂಬಂಧಿಸಿ ಯಾವುದೇ ಸ್ಕೀಮ್ ಇರುವುದಿಲ್ಲ. ಇವರಿಗೆ ರೈಲು ಮತ್ತು ವಿಮಾನ ಪ್ರಯಾಣದಲ್ಲಿ ನೀಡಲಾಗುತ್ತಿದ್ದ ಶೇ.50ರ ವಿನಾಯಿತಿಯನ್ನೂ ತೆಗೆದು ಹಾಕಲಾಗಿದೆ.

ಅದನ್ನು ಮರಳಿ ನೀಡಲಾಗುವುದೆಂಬ ಮಾತು ಕೇವಲ ಭರವಸೆಯಾಗಿಯೇ ಉಳಿದಿದೆ. ಈ ವಿಷಯದಲ್ಲಿ ಏನಾದರೂ ಕೇಳಿದರೆ, ಇಂದಲ್ಲದಿದ್ದರೆ ನಾಳೆ ಆಗುತ್ತದೆ ಎಂಬ ಉತ್ತರ ಸಿಗುತ್ತದೆ. ಆ ನಾಳೆಗಾಗಿ ನಿವೃತ್ತರು ಕಾಯುತ್ತಿದ್ದಾರೆ...

ನಿವೃತ್ತರಿಗೆ ನೀಡುವ ಪಿಂಚಣಿಯಲ್ಲಿ ಏಕರೂಪತೆ ಇರುವುದಿಲ್ಲ. ಕೆಲವರಿಗೆ ಹಳೆಯ ಪಿಂಚಣಿ ಸ್ಕೀಮ್, ಹಲವರಿಗೆ ಹೊಸ ಸ್ಕೀಮ್, ಮತ್ತೆ ಕೆಲವರಿಗೆ ಇತ್ತೀಚಿನ ಯುಪಿಎಸ್ ಸ್ಕೀಮ್. ಕೆಲವರ್ಗದ ಪಿಂಚಣಿದಾರರಿಗೆ, ಪ್ರತಿ ಬಾರಿ ವೇತನ ಪರಿಷ್ಕರಣೆಯಾದ ನಂತರ ಪಿಂಚಣಿಯೂ ಪರಿಷ್ಕರಣೆಯಾಗುತ್ತದೆ. ಆದರೆ ಮತ್ತೆ ಕೆಲವರಿಗೆ ಮೊದಲ ತಿಂಗಳು ತೆಗೆದುಕೊಂಡ ಪಿಂಚಣಿಯು ಕೊನೆಯ ಉಸಿರು ಇರುವವರೆಗೂ ಹಾಗೆಯೇ ಇರುತ್ತಿದ್ದು, ಆಗೊಮ್ಮೆ ಈಗೊಮ್ಮೆ ತುಟ್ಟಿಭತ್ಯೆ ರೀತಿಯಲ್ಲಿ ಸ್ವಲ್ಪ ಕಾಳು ಹಾಕಲಾಗುತ್ತದೆ.


ಬ್ಯಾಂಕ್‌ನ ನಿವೃತ್ತ ಉದ್ಯೋಗಿಗಳಿಗೆ ಪಿಂಚಣಿಯ ಉನ್ನತೀಕರಣದ ಭಾಗ್ಯವಿಲ್ಲ, ಅದಕ್ಕಾಗಿ ಅವರು ಎರಡು ದಶಕಗಳಿಂದ ಹೋರಾಡುತ್ತಿದ್ದಾರೆ. ಇಂದಲ್ಲ ನಾಳೆ ಆಗುತ್ತದೆ ಎಂದು ಶಬರಿಯಂತೆ ನಿರೀಕ್ಷಿಸಿದ ಇಂಥ ಸಾವಿರಾರು ಮಂದಿ ಇಹಲೋಕ ತ್ಯಜಿಸಿದ್ದಾರೆ.

ನಮ್ಮ ದೇಶದಲ್ಲಿ ಪಿಂಚಣಿ ವಿಷಯದಲ್ಲಿ ಜನಪ್ರತಿನಿಧಿಗಳಿಗೊಂದು ನಿಯಮಾವಳಿಯಾದರೆ, ಜನಸಾಮಾನ್ಯರಿಗೊಂದು ನಿಯಮಾವಳಿ. ಜನಪ್ರತಿನಿಧಿಗಳು ತಮ್ಮ ಹುದ್ದೆಗೆ ಅನುಸಾರವಾಗಿ ಪಿಂಚಣಿ ಪಡೆಯುತ್ತಾರಂತೆ. ಶಾಸಕರಾಗಿ ಒಂದು ಪಿಂಚಣಿ, ಮಂತ್ರಿಯಾಗಿ ಒಂದು, ಉಪರಾಷ್ಟ್ರಪತಿಯಾಗಿ ಒಂದು, ಪ್ರಧಾನಿಯಾಗಿ ಒಂದು ಮತ್ತು ರಾಷ್ಟ್ರಪತಿಯಾಗಿ ಒಂದು ಹೀಗೆ ಎಲ್ಲಾ ಹುದ್ದೆಗಳಿಗೆ ಪಿಂಚಣಿ ಪಡೆಯುತ್ತಾರಂತೆ. ಉಪರಾಷ್ಟ್ರಪತಿ ಸ್ಥಾನಕ್ಕೆ ಇತ್ತೀಚೆಗಷ್ಟೇ ರಾಜೀನಾಮೆ ನೀಡಿದ ಜಗದೀಪ್ ಧನಕರ್ ಅವರು, ಹಿಂದೊಮ್ಮೆ ರಾಜಸ್ಥಾನದಲ್ಲಿ ಶಾಸಕರಾಗಿದ್ದರು; ಉಪರಾಷ್ಟ್ರಪತಿ ಹುದ್ದೆಗೆ ರಾಜೀನಾಮೆ ನೀಡಿದ ನಂತರ, ರಾಜಸ್ಥಾನದಲ್ಲಿ ಶಾಸಕರಾಗಿದ್ದ ಬಾಬತ್ತನ್ನೂ ಮುಂದಿಟ್ಟುಕೊಂಡು ಅವರು ಪಿಂಚಣಿಗೆ ಅರ್ಜಿ ಗುಜರಾಯಿಸಿದ್ದಾರೆ.

ಅದು ಸದ್ಯದಲ್ಲಿಯೇ ಒಪ್ಪಿಗೆ ಪಡೆಯುವ ಸಾಧ್ಯತೆ ಇದೆಯಂತೆ! ಮಾಧ್ಯಮಗಳ ವರದಿಯ ಪ್ರಕಾರ ಅವರು ಶಾಸಕರಾಗಿ 42000 ರುಪಾಯಿ, ಲೋಕಸಭಾ ಸದಸ್ಯರಾಗಿ 45000 ರುಪಾಯಿ, ಉಪ ರಾಷ್ಟ್ರಪತಿಯಾಗಿ 200000 ರುಪಾಯಿ- ಹೀಗೆ ಮೂರು ರೀತಿಯ ಪಿಂಚಣಿಯನ್ನು ಪಡೆಯುತ್ತಾರಂತೆ.

ಸಾಲದೆಂಬಂತೆ, 3-4 ಜನ ಸಿಬ್ಬಂದಿಗಳು, ಬಂಗಲೆ, ವೈದ್ಯರ ಸೌಲಭ್ಯಗಳು ಬೇರೆ!

ಹಾಗೆಯೇ, ಇಂಥ



ನಿವೃತ್ತರಿಗೆ ನೀಡುವ ಪಿಂಚಣಿಯಲ್ಲಿ ಏಕರೂಪತೆ ಇರುವುದಿಲ್ಲ. ಕೆಲವರಿಗೆ ಹಳೆಯ ಪಿಂಚಣಿ ಸ್ಕೀಮ್, ಹಲವರಿಗೆ ಹೊಸ ಸ್ಕೀಮ್, ಮತ್ತೆ ಕೆಲವರಿಗೆ ಇತ್ತೀಚಿನ ಯುಪಿಎಸ್ ಸ್ಕೀಮ್. ಕೆಲವರ್ಗದ ಪಿಂಚಣಿದಾರರಿಗೆ, ಪ್ರತಿ ಬಾರಿ ವೇತನ ಪರಿಷ್ಕರಣೆಯಾದ ನಂತರ ಪಿಂಚಣಿಯೂ ಪರಿಷ್ಕರಣೆಯಾಗುತ್ತದೆ. ಆದರೆ ಮತ್ತೆ ಕೆಲವರಿಗೆ ಮೊದಲ ತಿಂಗಳು ತೆಗೆದುಕೊಂಡ ಪಿಂಚಣಿಯು ಕೊನೆಯ ಉಸಿರು ಇರುವವರೆಗೂ ಹಾಗೆಯೇ ಇರುತ್ತಿದ್ದು, ಆಗೊಮ್ಮೆ ಈಗೊಮ್ಮೆ ತುಟಿಭತ್ಯೆ ರೀತಿಯಲ್ಲಿ ಸ್ವಲ್ಪ ಕಾಳು ಹಾಕಲಾಗುತ್ತದೆ.

ಜನಪ್ರತಿನಿಧಿಗಳ ವಯಸ್ಸು 70 ವರ್ಷವನ್ನು ಮೀರಿದರೆ, ಪಿಂಚಣಿಯನ್ನು ಶೇ.20ರಷ್ಟು ಹೆಚ್ಚಿಸಲಾಗುವುದು, ಕಾಲಕಾಲಕ್ಕೆ ಪಿಂಚಣಿಯಲ್ಲಿ ಉನ್ನತೀಕರಣ ಬೇರೆ. ಜನಸಾಮಾನ್ಯರಿಗೆ ಇದು ಸಾಧ್ಯವೇ? ಒಂದು ಪಿಂಚಣಿಯೇ ಕನಸಾಗಿರುವಾಗ ಮೂರು ಬಗೆಯ ಪಿಂಚಣಿಗಳು ನನಸಾಗುವುದೆಲ್ಲಿಂದ ಬಂತು!

ಜನಪ್ರತಿನಿಧಿಯೇತರ ಪಿಂಚಣಿದಾರರಿಗೆ ಇಂಥ ಹೆಚ್ಚಳ ಮತ್ತು ಉನ್ನತೀಕರಣ ಗಗನಕುಸುಮವೇ! ಪಿಂಚಣಿಯ ಉನ್ನತೀಕರಣ ಮತ್ತು ಹೆಚ್ಚಳವು ಯಾವುದೇ ಪಿಂಚಣಿದಾರರ ಹಕ್ಕು ಎನ್ನುವ ನ್ಯಾಯಾಲಯದ ಮಹತ್ವದ ತೀರ್ಪು ಇದೆ ಎಂದು ಹೇಳಲಾಗುತ್ತಿದ್ದು, ಅದನ್ನು ಪಡೆಯಲು ಹೋರಾಡಬೇಕು. ಏಕೆಂದರೆ, ಎಷ್ಟೇ ವರ್ಷ ಸೇವೆ ಸಲ್ಲಿಸಿರಲಿ, 80-90 ವರ್ಷ ವಯಸ್ಸಾಗಿರಲಿ, ಅಂಥ ಜನಸಾಮಾನ್ಯರಿಗೆ ಪಿಂಚಣಿಯ ಉನ್ನತೀಕರಣವಿಲ್ಲ.

ಕೆಲವು ಸಂದರ್ಭದಲ್ಲಿ ಸಂಬಂಧಪಟ್ಟ ಇಲಾಖೆಗಳು ಈ ವಿಷಯವನ್ನು ಚರ್ಚಿಸಲು ನಿವೃತ್ತರೊಡನೆ ಇಲ್ಲ ಎಂದು ಹೇಳಿ ನುಣುಚಿಕೊಳ್ಳುತ್ತಿವೆಯಂತೆ. ಸೇವೆಗೆ ಸಂಬಂಧಪಟ್ಟ ಪ್ರಕರಣಗಳು ಇತ್ಯರ್ಥಗೊಳ್ಳಲು ಸುದೀರ್ಘ ಸಮಯ ಹಿಡಿಯುತ್ತಿದೆ. ಅಂತೆಯೇ, ಇಂಥ ಹಿರಿಯ ನಾಗರಿಕರ ಪ್ರಕರಣಗಳನ್ನು ತ್ವರಿತವಾಗಿ ವಿಚಾರಣೆಗೆ ತೆಗೆದುಕೊಳ್ಳುವಂತೆ ಸಂಜಯ್ ರಾವತ್ ಹೀಗೆ ಗಟ್ಟಿದನಿಯಲ್ಲಿ ಒತ್ತಾಯಿಸಿದಂತೆ ಕಾಣುತ್ತದೆ.

ಪಿಂಚಣಿದಾರರ ಸಮಸ್ಯೆಗಳು, ಪಿಂಚಣಿ ವ್ಯವಸ್ಥೆಯಲ್ಲಿನ ಲೋಪದೋಷಗಳು, ಪಿಂಚಣಿಯ ಉನ್ನತೀಕರಣ ಮುಂತಾದ ವಿಷಯಗಳಿಗೆ ಸಂಬಂಧಿಸಿ ಪಿಂಚಣಿದಾರರು ನ್ಯಾಯಾಲಯದಲ್ಲಿ ಸುದೀರ್ಘ ಅವಧಿಯವರೆಗೆ ಹೋರಾಡುವುದನ್ನು ತಪ್ಪಿಸಲು ರಾಜ್ಯಸಭಾ ಸದಸ್ಯ ಸಂಜಯ್ ರಾವತ್ ಅವರು ಒಂದಿಷ್ಟು ಬೇಡಿಕೆಗಳನ್ನು/ಸಲಹೆಗಳನ್ನು ಸರಕಾರದ ಸಮ್ಮುಖದಲ್ಲಿ ಮಂಡಿಸಿದ್ದಾರೆ.

60 ವರ್ಷ ದಾಟಿದ ಪ್ರತಿಯೊಬ್ಬರಿಗೂ ಪಿಂಚಣಿ ನೀಡಬೇಕು, ಪಿಂಚಣಿದಾರರ ಸ್ಟೇಟಸ್ ಪ್ರಕಾರ ಪಿಂಚಣಿ ನೀಡಬೇಕು, ಪಿಂಚಣಿದಾರರ ಕೊನೆಯುಸಿರು ಇರುವವರೆಗೆ ಅವರಿಗೆ ವಿಮಾ ಸೌಲಭ್ಯನೀಡಿ ಸರಕಾರವೇ ಅದರ ಪ್ರೀಮಿಯಂ ಅನ್ನು ಭರಿಸಬೇಕು, ಆದ್ಯತೆಯ ಮೇರೆಗೆ ಹಿರಿಯ ನಾಗರಿಕರ ಪ್ರಕರಣಗಳನ್ನು ನ್ಯಾಯಾಲಯಗಳು ವಿಚಾರಣೆಗೆ ತೆಗೆದುಕೊಂಡು ತೀರ್ಪು ನೀಡಬೇಕು, ಎಲ್ಲಾ ಪಟ್ಟಣ-ನಗರಗಳಲ್ಲಿ ಹಿರಿಯ ನಾಗರಿಕರಿಗಾಗಿ ವಸತಿ ಸೌಲಭ್ಯ ಕಲ್ಪಿಸಬೇಕು ಎಂದು ತಿಳಿಸಿರುವ ಸಂಜಯ್ ರಾವತ್ ಅವರು, ಹಿರಿಯ ನಾಗರಿಕರ ಬಳಿ ಇರುವ ವಾಹನಗಳು ಹೆಚ್ಚು ಬಳಕೆಯಾಗದೆ ಇರುವುದರಿಂದ, 10-15 ವರ್ಷಕ್ಕೆ ಕಾರುಗಳನ್ನು ಸ್ಕ್ರ್ಯಾಪ್ ಮಾಡುವ ನಿಯಮಾವಳಿಯನ್ನು ಹಿರಿಯ ನಾಗರಿಕರಿಗೆ ಅನ್ವಯಿಸಬಾರದು ಎಂದೂ ಸರಕಾರವನ್ನು ಆಗ್ರಹಿಸಿದ್ದಾರೆ.

ಹಾಗೆ ನೋಡಿದರೆ, ನಿವೃತ್ತರ ಮತ್ತು ಹಿರಿಯ ನಾಗರಿಕರ ಸಮಸ್ಯೆಗಳು ಹಾಗೂ ಬೇಡಿಕೆಗಳನ್ನು ಸರಕಾರದ ಮುಂದೆ ನಿರಂತರವಾಗಿ ಮಂಡಿಸಲಾಗುತ್ತಿದೆ. ಸಂಸದರ ಮೂಲಕ ನೂರಾರು ಮನವಿಗಳನ್ನು ಸಂಬಂಧಪಟ್ಟ ಸಚಿವರಿಗೆ ಸಲ್ಲಿಸಲಾಗಿದೆ. ಆದರೆ ಬಹುತೇಕ ಸಂಸದರು ಸಂಜಯ್ ರಾವತ್ ಅವರ ರೀತಿಯಲ್ಲಿ ಹೀಗೆ ಗಟ್ಟಿದನಿ ಎತ್ತಿ ಸರಕಾರದ ಗಮನ ಸೆಳೆದಿರಲಿಲ್ಲ. ಸರಕಾರವು ಈ ಬಾರಿಯಾದರೂ, ನಿರ್ಲಕ್ಷಿಸಲ್ಪಟ್ಟ ನಿವೃತ್ತರ ಮತ್ತು ಹಿರಿಯ ನಾಗರಿಕರ ಸಮಸ್ಯೆಗಳತ್ತ ಕಣ್ಣು ಹಾಯಿಸಬಹುದೇ ಎಂದು ಕಾತರದಿಂದ ಎದುರುನೋಡಲಾಗುತ್ತಿದೆ.

**- ರಮಾನಂದ** ಶರ್ಮಾ

# ಭಾವ ಲಹರಿ

## ಚಂದ್ರಗ್ರಹಣದ ಪೌರಾಣಿಕ ಹಿನ್ನೆಲೆ

ಚಂದ್ರಗ್ರಹಣದ ಪೌರಾಣಿಕ ಹಿನ್ನೆಲೆಯು ಅಮೃತ ಮಂಥನದ ಸಂದರ್ಭದಲ್ಲಿ ರಾಹು ಹಾಗೂ ಕೇತು ಗ್ರಹಗಳು ರೂಪುಗೊಂಡ ಪರಿಯನ್ನು ವಿಶದವಾಗಿ ವಿವರಿಸುತ್ತದೆ. ಸಮುದ್ರ ಮಥನ ಕಾಲದಲ್ಲಿ ಅಮೃತವು ಹೊರಬಂದಾಗ, ದೇವತೆಗಳೊಂದಿಗೆ ಸ್ವಭಾನು ಎಂಬ ರಾಕ್ಷಸನಿಗೂ ಅದು ಸಲ್ಲುತ್ತಿದೆ ಎಂಬುದು ಅರಿವಿಗೆ ಬಂದಾಗ ಮಹಾವಿಷ್ಣು ಸ್ವಭಾನುವನ್ನು ಚಕ್ರಾಯುಧದಿಂದ ಮರ್ದಿಸುವ ಕಥೆಯದು.



ಚಂದ್ರಗ್ರಹಣದ ಪೌರಾಣಿಕ ಹಿನ್ನೆಲೆಯು ಅಮೃತ ಮಂಥನದ ಸಂದರ್ಭದಲ್ಲಿ ರಾಹು ಹಾಗೂ ಕೇತು ಗ್ರಹಗಳು ರೂಪುಗೊಂಡ ಪರಿಯನ್ನು ವಿಶದವಾಗಿ ವಿವರಿಸುತ್ತದೆ. ಸಮುದ್ರ ಮಥನ ಕಾಲದಲ್ಲಿ ಅಮೃತವು ಹೊರ ಬಂದಾಗ, ದೇವತೆಗಳೊಂದಿಗೆ ಸ್ವಭಾನು ಎಂಬ ರಾಕ್ಷಸನಿಗೂ ಅದು ಸಲ್ಲುತ್ತಿದೆ ಎಂಬುದು ಅರಿವಿಗೆ ಬಂದಾಗ ಮಹಾವಿಷ್ಣು ಸ್ವಭಾನುವನ್ನು ಚಕ್ರಾಯುಧದಿಂದ ಮರ್ದಿಸುವ ಕಥೆಯದು.

ಶ್ರೀಮನ್ನಾರಾಯಣನ ಆಯುಧವಾದ ಸುದರ್ಶನ ಚಕ್ರದ ಏಟಿಗೆ ಒಂದೇ ಕಾಯವಾಗಿದ್ದ ಸರ್ಪ ಸ್ವರೂಪಿ ದೇಹವು ಮಿಂಚಿನ ಕಾರ್ಯಾಚರಣೆ ನಡೆಯಿತೆಂಬಂತೆ ಎರಡು ಹೋಳುಗಳಾಗಿ ಭೇದಿಸಲ್ಪಡುತ್ತವೆ. ಸರ್ಪದ ಹೆಡೆಯ ಭಾಗವನ್ನು, ಅಂದರೆ ರುಂಡವನ್ನು ರಾಹು ಎಂಬ ಹೆಸರಿನಲ್ಲೂ, ಮುಂಡದ ಭಾಗವನ್ನು ಕೇತು ಎಂಬ ಹೆಸರಿನಲ್ಲಿಯೂ ಗುರುತಿಸುವ ಕ್ರಮ ನಮ್ಮ ಭಾರತೀಯ ಶಾಸ್ತ್ರದಲ್ಲಿದೆ.

ಹೀಗೆ ಅಮೃತದ ಅಂಶ ಸ್ವಭಾನು ಎಂಬ ರಾಕ್ಷಸನ ಮೋಸದ ತಂತ್ರದಿಂದಾಗಿ ಅಪವ್ಯಯವಾಗುತ್ತಿದೆ ಎಂಬ ಎಚ್ಚರವನ್ನು ಶ್ರೀಮನ್ನಾರಾಯಣನಿಗೆ ಒದಗಿಸಿದವರೇ ಸೂರ್ಯ ಹಾಗೂ ಚಂದ್ರರಾಗಿರುವುದರಿಂದ ಸಮಯ ಸಿಕ್ಕಾಗ ರಾಹು ಅಥವಾ ಕೇತುಗಳು ಸೂರ್ಯ, ಚಂದ್ರರನ್ನು ನುಂಗುವ ಅಥವಾ ಘಾಸಿಗೊಳಿಸುವ ಪ್ರಯತ್ನ ನಡೆಸಲು, ಸೇಡಿನ ವಿಷಜ್ವಾಲೆ ಹೊತ್ತವರಾಗಿ, ಆಗಾಗ ಮುಂದಾಗುತ್ತಲೇ ಇರುತ್ತಾರೆ ಎಂಬುದು ನಮ್ಮ ಆರ್ಷೇಯ ನಂಬಿಕೆ.

ಈ ರೀತಿಯ ಚಂದ್ರ-ಸೂರ್ಯರ ಮೇಲಿನ ರಾಹು ಕೇತುಗಳ ಆಕ್ರಮಣ, ಸಫಲವಾಗುವ ಕಾಲ ಘಟ್ಟವೇ ಗ್ರಹಣ ಎಂಬ ವಿಧದಲ್ಲಿ ನಾವು ಭಾರತೀಯರು ನಂಬಿಕೆಯನ್ನೂ ಹೊಂದಿದ್ದೇವೆ. ದಿನಾಂಕ 7.9.2025ರ ಭಾನುವಾರ ಖಗ್ರಾಸ ಚಂದ್ರ ಗ್ರಹಣ. ಈ ಗ್ರಹಣ ಭಾರತದಾದ್ಯಂತ ಗೋಚರಿಸುವುದು. ಪೂರ್ವಭಾದ್ರ ನಕ್ಷತ್ರ ಕುಂಭ ರಾಶಿಯಲ್ಲಿ, ಚಂದ್ರಗ್ರಹಣ ಸಂಭವಿಸಲಿದೆ.


ಹಿಂದೂ ಧರ್ಮಕ್ಕೆ, ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ನಮ್ಮ ಪೂರ್ವಿಕರು ಅದೆಷ್ಟೋ ಬುದ್ಧಿವಂತಿಕೆಯಿಂದ ಅನೇಕ ವೈಜ್ಞಾನಿಕ ವಿಷಯಗಳನ್ನು ಪೌರಾಣಿಕ ಹಿನ್ನೆಲೆಯಲ್ಲಿ, ಕಥೆಗಳ ರೂಪದಲ್ಲಿ ನಮಗೆ ತಿಳಿಸಿ ಹೇಳಿದ್ದಾರೆ. ಪ್ರತಿಯೊಂದು ಕಥೆಗೂ ತನ್ನದೇ ಆದ ಪೌರಾಣಿಕ ಹಿನ್ನೆಲೆ ಇದೆ. ಅನೇಕ ಪುರಾಣದ ಕಥೆಗಳು ವೈಜ್ಞಾನಿಕ ತಳಹದಿಯಲ್ಲಿ ರೂಪುಗೊಂಡಿವೆ.

ಇಂದಿಗೂ ಕೂಡ ಅವುಗಳಲ್ಲಿ ಬಹಳಷ್ಟು ಪ್ರಸ್ತುತವಾಗಿದೆ. ಆ ನಿಟ್ಟಿನಲ್ಲಿ ನಾವಿನ್ನೂ ನಮ್ಮ ಪುರಾಣಗಳನ್ನು ಅದರ ಹಿಂದಿನ ಸತ್ಯಾಸತ್ಯತೆಗಳನ್ನು ಇನ್ನು ಸಂಪೂರ್ಣವಾಗಿ ತಿಳಿದುಕೊಂಡೇ ಇಲ್ಲ ಎನ್ನಬಹುದು.

ಆದ್ದರಿಂದಲೇ ಭಾರತೀಯರಾದ ನಾವು ಮೊದಲು ನಮ್ಮ ಪುರಾಣ, ಇತಿಹಾಸವನ್ನು ಸರಿಯಾದ ರೀತಿಯಲ್ಲಿ ಅರಿಯುವ ಪ್ರಯತ್ನ ಮಾಡಬೇಕು. ಅದರಲ್ಲಿ ನಮಗೆ ಸಿಗುವ ಅನೇಕ ವಿಚಾರಗಳು ನಮಗೆ ಜೀವನದಲ್ಲಿ ಕೇವಲ ಮೌಲ್ಯಗಳನ್ನು ಮಾತ್ರ ಅಲ್ಲದೆ, ಪ್ರಸ್ತುತ ಪರಿಸ್ಥಿತಿಗೆ ಬೇಕಾದ ಅನೇಕ ವೈಜ್ಞಾನಿಕ ವಿಚಾರಗಳನ್ನ ಕೂಡ ಅರ್ಥ ಮಾಡಿಕೊಳ್ಳಲು ಪೂರಕವಾಗಿರುತ್ತದೆ.

ಉದಾಹರಣೆಗೆ ಮದುವೆಯಾದ ದಂಪತಿಗಳಿಗೆ ಅರುಂಧತಿ ನಕ್ಷತ್ರವನ್ನು ತೋರಿಸುವ ಒಂದು ಮದುವೆಯ ಪದ್ಧತಿ ಇದೆ. ವಿವಾಹ ಸಮಾರಂಭದಲ್ಲಿ, ವಿಶೇಷವಾಗಿ ಸಪ್ತಪದಿಯ ನಂತರ, ವರನು ವಧುವಿಗೆ ಅರುಂಧತಿ ನಕ್ಷತ್ರವನ್ನು ತೋರಿಸುತ್ತಾನೆ. ಇದು ದಾಂಪತ್ಯ ಜೀವನದಲ್ಲಿ ಅವರ ನಿಷ್ಠೆ ಮತ್ತು ಸಹಬಾಳ್ವೆಯನ್ನು ನೆನಪಿಸಲು ಮಾಡಲಾಗುತ್ತದೆ.

ಹಿಂದೂ ಪುರಾಣಗಳಲ್ಲಿ ವಶಿಷ್ಠ ಮುನಿ ಮತ್ತು ಅರುಂಧತಿ ಆದರ್ಶ ದಂಪತಿಗಳಾಗಿದ್ದರು, ಅವರು ಪರಸ್ಪರ ನಿಷ್ಠೆ ಮತ್ತು ಪ್ರೀತಿಗೆ ಹೆಸರುವಾಸಿಯಾಗಿದ್ದರು. ಅರುಂಧತಿ ನಕ್ಷತ್ರವನ್ನು ತೋರಿಸುವ ಆಚರಣೆ ಆದರ್ಶ ದಂಪತಿಗಳಾದ ವಶಿಷ್ಠ ಮತ್ತು ಅರುಂಧತಿಯನ್ನು ಪ್ರತಿನಿಧಿಸುತ್ತದೆ, ಇದು ವೈವಾಹಿಕ ನಿಷ್ಠೆ, ಪ್ರೀತಿ ಮತ್ತು ಪರಸ್ಪರ ಸಮನ್ವಯದ ಸಂಕೇತವಾಗಿದೆ. ಈ ಆಚರಣೆಯು ದಂಪತಿಗಳು ಜೀವನಪೂರ್ತಿ ಒಟ್ಟಾಗಿ ಪಯಣಿಸುವುದರ ಸಂಕೇತವಾಗಿದೆ.



ಅರುಂಧತಿ ಮತ್ತು ವಶಿಷ್ಠ ಇಬ್ಬರೂ ಸಮನ್ವಯವಾಗಿ ತಿರುಗುವ ನಕ್ಷತ್ರಗಳಾಗಿದ್ದು, ಪತಿ-ಪತ್ನಿಯರು ಪರಸ್ಪರ ಹೆಚ್ಚು ಕಡಿಮೆ ಇಲ್ಲದೆ, ಸಮಾನವಾಗಿ ಜೀವನದ ಹಾದಿಯಲ್ಲಿ ಸಾಗಬೇಕು ಎಂಬುದನ್ನು ಇದು ಸೂಚಿಸುತ್ತದೆ. ಇಂತಹ ಅನೇಕ ವಿಚಾರಗಳು ನಮ್ಮ ಪದ್ಧತಿಗಳಲ್ಲಿ ಆಚರಣೆಗಳಲ್ಲಿ ಹಾಸು ಹಕ್ಕಾಗಿವೆ. ಇನ್ನಾದರೂ ಇವುಗಳನ್ನು ಪ್ರಯತ್ನ ಪೂರ್ವಕವಾಗಿ ತಿಳಿದು ಆಚರಿಸೋಣ.

**- ರೂಪಾ** ಗುರುರಾಜ್

## ಕನ್ನಡ ಕವನಗಳು ★★★★★★

### ನಮ್ಮವರು ಯಾರು

ಮಾತಾಡುವ ಜನರು
ನಮ್ಮವರಲ್ಲ
ಸಾಗುವಾಗ ಸಿಕ್ಕವರು
ನಮ್ಮವರಲ್ಲ
ನಮ್ಮವರು ಎಂದುಕೊಂಡವರೂ
ನಮ್ಮವರಲ್ಲ
ಹಾಗಾದರೇ ನಮ್ಮವರು ಯಾರು?
ನಮಗಲ್ಲದವರು ಎನ್ನುವ ಬ್ರಮೆಯೋ
ಕಾಡುವಂತಹುದು
ಇದ್ಯಾಕೋ ಇಲ್ಲದ ಕೊರಗು
ಅವರಶ್ಟಕ್ಕೇ ಅವರಿದ್ದರೂ ಸಾಕು
ನಮ್ಮಶ್ಟಕ್ಕೇ ನಾವಿದ್ದರೂ ಆಯಿತು
ಎನ್ನುವುದಶ್ಟೇ ಒಳಿತು
ಅನಾವಶ್ಯಕವೊಂದು ಕಳೆದ್ಹೋಗುವುದು
ಅವಶ್ಯಕತೆಯೊಂದು ಹುಟ್ಟುವುದು
ಇಲ್ಲಿ ಮಾಮೂಲು
ಬದುಕಲಿಶ್ಟು ಸಾಕು
ಕಶ್ಟ-ಸುಕವಿಲ್ಲಿ ಸಮಪಾಲು
ಇಲ್ಲಗಳ ನಡುವೆ
ಬಂದಿಸದಿದ್ದರೂ ಸಾಕು
ಬಯಸುವ ಬಾಂದವ್ಯ
ತಂತಾನೇ ಹುಟ್ಟುವುದು
ಬದುಕೊಂದು ಬದುಕಿಸಿ ಬಿಡುವುದು
ದಡ ತಲುಪಿಸಲು ಕೈ ಜೋಡಿಸಿದವರು
ಯಾರೋ ಗೊತ್ತಿಲ್ಲದವರು ಆದರೇನು?
ಆಗಿಬಿಟ್ಟರು ಆ ಕ್ಷಣದಲ್ಲಿ ನಮ್ಮವರು

**- ಸವಿತಾ.**



## ಬದುಕು ಎಂಬ ಶಿಕ್ಷಕ, ಮನುಷ್ಯ ಎಂಬ ವಿದ್ಯಾರ್ಥಿ

ಬದುಕಿನ ಅನಿಶ್ಚಿತತೆ, ಮನುಷ್ಯನ ಬದುಕಿನಲ್ಲಿ ವಿಧಿಯು ಆಡುವ ಆಟ, ಎಷ್ಟೇ ಪ್ರಯತ್ನ ಮಾಡಿದರೂ ತನ್ನ ವಿಧಿಯಲ್ಲಿ ಬರೆದ ದುರಂತದಿಂತ ತಪ್ಪಿಸಿಕೊಳ್ಳಲಾಗದ ಮನುಷ್ಯನ ಅಸಹಾಯಕತೆ ಇವುಗಳನ್ನು ಈ ಮಹಾನ್ ನಾಟಕ ಮನೋಜ್ಞವಾಗಿ ಹೇಳುತ್ತದೆ. ಒಂದು ಸಂದರ್ಭದಲ್ಲಿ ಅಯ್ಯೋ, ದುರ್ವಿಧಿಯೇ? ನಾಳೆ ಎಂಬುದು ಏನೆಂದು ಗೊತ್ತಿರದ ಮನುಷ್ಯನ ಪಾಡೆ!! ಓಹ್. ಅಯ್ಯೋ.., ಸಾಯುವವರೆಗೂ ಯಾರನ್ನೂ ಸುಖಿ ಅನ್ನಬೇಡ ಎಂಬ ಮಾತನ್ನು ನಾಟಕಕಾರ ಸಫೋಕ್ಲಿಸ್ ಒಂದು ಎಚ್ಚರಿಕೆಯೆಂಬಂತೆ, ಒಂದು ಪಾತ್ರದ ಬಾಯಿಂದ ಹೇಳಿಸಿದ್ದಾನೆ.

**ಇದು ಬಾಳು ನೋಡು ಇದ ತಿಳಿದೆನೆಂದರೂ ತಿಳಿದ ಧೀರನಿಲ್ಲ.**
**ಹಲವುತನದ ಮೈಮರೆಸುವಾಟವಿದು ನಿಜವು ತೋರದಲ್ಲ**
**ಎಂ.ಗೋಪಾಲಕೃಷ್ಣ ಅಡಿಗ (ಅಳುವ ಕಡಲೊಳು ತೇಲಿ ಬರುತಲಿದೆ ನಗೆಯ ಹಾಯಿದೋಣಿ ಕವಿತೆಯಿಂದ)**

ನಮ್ಮ ನವ್ಯಕಾವ್ಯದ ಈ ಆದ್ಯಕವಿ ಯಾವ ಗಳಿಗೆಯಲ್ಲಿ ಈ ಸಾಲುಗಳನ್ನು ಬರೆದರೋ ಏನೋ, ಇದು ಮನುಷ್ಯನ ಬದುಕಿಗೊಂದು ನಿತ್ಯಸತ್ಯವಾದ ಭಾಷ್ಯವಾಗಿಬಿಟ್ಟಿದೆ. ಹೌದು. ಬಾಳನ್ನು ತಿಳಿಯುವುದು ಸುಲಭ ಅಲ್ಲ. ತಿಳಿದೆ ಎಂದು ನಾವು ಒಂದು ಗಳಿಗೆ ಮೆರೆದೆವು ಅನ್ನಿ, ಮರುಗಳಿಗೆಗೆ ಅದು ಬದಲಾಗಿ ಆನೋಡೀಗ, ಏನು ಮಾಡ್ತೀಯ!? ಎಂದು ಸವಾಲೆಸೆದು ನಮ್ಮನ್ನು ಅಣಕಿಸುತ್ತದೆ!! ಮನುಷ್ಯನೆಂಬ ವಿದ್ಯಾರ್ಥಿಯು ಒಟ್ಟು ಬದುಕು ಮತ್ತು ನನ್ನ ಬದುಕು ಎಂಬ ವಿಷಯವನ್ನು ಕುರಿತು ತನಗೆ ಲಭ್ಯವಿರುವ ಪ್ರಶ್ನೆಪತ್ರಿಕೆ ಹಿಡಿದು ಅಹಾ, ನಾನು ಎಲ್ಲಕ್ಕೂ ಉತ್ತರ ಬರೆಯಲು ಸಿದ್ಧನಾದೆನಲ್ಲ! ನಾನೆಂತಹ ಜಾಣ!! ಅಂದುಕೊಳ್ಳುವಷ್ಟರಲ್ಲಿ ಬದುಕೆಂಬ ಶಿಕ್ಷಕ ಇವನಿಗೆ ಸಂಬಂಧಿಸಿದ ಪ್ರಶ್ನೆಪತ್ರಿಕೆಯಲ್ಲಿ ಪಠ್ಯಭಾಗವನ್ನೇ ಬದಲಾಯಿಸಿರುತ್ತಾನೆ! ಓದದೆಯೇ ಶಾಲಾಪರೀಕ್ಷೆಗೆ ಬಂದ ವಿದ್ಯಾರ್ಥಿಯಂತೆ ತಬ್ಬಿಬ್ಬಾಗಿ, ಕಣ್ಣು ಕಣ್ಣು ಬಿಡುತ್ತಾ ಕೂರುವ ಪಾಡು ಆ ಮನುಷ್ಯನದು.

ತರಗತಿಯಲ್ಲಿ ಮಕ್ಕಳಿಗೆ/ಹದಿಹರೆಯದವರಿಗೆ/ನವಯೌವನಿಗರಿಗೆ ಪಾಠ ಮಾಡುವ ವೃತ್ತಿಯಲ್ಲಿರುವ ನನ್ನಂತಹ ಶಿಕ್ಷಕ ವೃತ್ತಿಯವರು ತರಗತಿಯ ನಾಲ್ಕು ಗೋಡೆಗಳ ಒಳಗೆ, ನಮ್ಮ ನಮ್ಮ ಅಧ್ಯಯನ ವಿಷಯಗಳಿಗೆ ಸಂಬಂಧಿಸಿದಂತೆ ಪಾಠ ಮಾಡುವುದರಲ್ಲಿ ನಾನು ಸೈಸೈ, ನನಗೆ ಜೈಜೈ ಎಂದು ಎಷ್ಟೇ ಖುಷಿ ಪಟ್ಟರೂ, ಬದುಕಿನ ಮಟ್ಟಿಗೆ ನಾವು ಸಹ ವಿದ್ಯಾರ್ಥಿಗಳೇ. ಇನ್ಫೋಸಿಸ್ ಸಂಸ್ಥೆಯನ್ನು ಸ್ಥಾಪಿಸಿದ ಎನ್. ಆರ್. ನಾರಾಯಣಮೂರ್ತಿಯವರು ಹೇಳಿದಂತೆ ವಯಸ್ಕ ಜೀವನದಲ್ಲಿ ಪ್ರತಿದಿನವೂ ಒಂದು ಪರೀಕ್ಷೆಯೇ. ಹೌದಲ್ಲವೆ? ಶಾಲೆ, ಕಾಲೇಜಿನಲ್ಲಿ ಮೊದಲು ಪಾಠ, ನಂತರ ಪರೀಕ್ಷೆ, ಆದರೆ ನಿಜ ಜೀವನದಲ್ಲಿ ಮೊದಲು ಪರೀಕ್ಷೆ, ನಂತರ ಪಾಠ.

ಹಾಗಾದರೆ ಅಸಲಿಗೆ ಈ ಬದುಕು ಎಂದರೇನು? ಒಳ್ಳೆಯ ಬಾಳು ಎಂದರೆ ಏನು? ನಾವು ಚೆನ್ನಾಗಿ ಬಾಳಿದ್ದೇವೆಯೆ ಇಲ್ಲವೆ ಎಂದು ನಿರ್ಧಾರ ಮಾಡುವವರು ಯಾರು? ನಾವೋ ಅಥವಾ ಬೇರೆಯವರೋ? ಈ ಬದುಕು ಈ ಭೂಮಿಗೆ ಮುಗಿಯುತ್ತದೊ? ಅಥವಾ ಸಾವಿನ ನಂತರ ಮುಂದುವರಿಯುತ್ತದೊ? ಇಲ್ಲೇ ಸ್ವರ್ಗ ಇಲ್ಲೇ ನರಕ ಮೇಲೇನಿಲ್ಲ ಸುಳ್ಳು, ಹುಟ್ಟು ಸಾವು ಎರಡರ ಮಧ್ಯೆ ಮೂರು ದಿನದ ಬಾಳು ಎಂದು ಒಬ್ಬ ಸಿನಿಮಾಕವಿ ಹೇಳಿದ್ದು ಸರಿಯೊ? ಅಥವಾ ಅಲ್ಲಿದೆ ನಮ್ಮನೆ, ಇಲ್ಲಿ ಬಂದೆ ಸುಮ್ಮನೆ ಎಂದು ಹರಿದಾಸರು ಹೇಳಿದ್ದು ಸರಿಯೊ? ಬದುಕನ್ನು ಸ್ವಲ್ಪ ಮಟ್ಟಿಗಾದರೂ ಅರಿತವರು ಯಾರು? ಪುಟ್ಟ ಮಕ್ಕಳೊ, ಇಲ್ಲ ವೃದ್ಧರೊ? ತೃಪ್ತಿ ಅನ್ನುವುದು ಯಾರಲ್ಲಿ ನೆಲೆಸಿರುತ್ತದೆ? ಬಡವರಲ್ಲೊ ಅಥವಾ ಶ್ರೀಮಂತರಲ್ಲೊ? ಸ್ವದೇಶದಲ್ಲಿ ಉಳಿದವರಲ್ಲೊ, ವಿದೇಶಕ್ಕೆ ಹೋದವರಲ್ಲೊ? ಇಂತಹ ಪ್ರಶ್ನೆಗಳು ಆಗಾಗ ನಮ್ಮನ್ನು ಕಾಡುತ್ತಲೇ ಇರುತ್ತವೆ ಅಲ್ಲವೆ?

ಇನ್ನು ಎಲ್ಲರೂ ಬದುಕಿನ ಗುರಿ ಎಂದು ತಿಳಿಯುವ ಸುಖ-ಸಂತೋಷಗಳ ಮಾತಿಗೆ ಬರೋಣ. ಸುಖ, ಸಂತೋಷ ಇವು ಎಷ್ಟೊಂದು ವ್ಯಕ್ತಿನಿಷ್ಠವಾದ ಪದಗಳಲ್ಲವೆ? ಒಬ್ಬರಿಗೆ ಮಾತಿನಲ್ಲಿ ಸುಖ, ಇನ್ನೊಬ್ಬರಿಗೆ ಮೌನದಲ್ಲಿ ಸುಖ. ಒಬ್ಬರು ಏಕಾಂಗಿಯಾಗಿದ್ದರೆ ಸಂತೋಷವಾಗಿರುತ್ತಾರೆ, ಇನ್ನೊಬ್ಬರಿಗೆ ಜನರ ಜೊತೆಯಲ್ಲಿದ್ದರೆ ಸಂತೋಷ. ಕೆಲವರು ಪ್ರವಾಸದಲ್ಲಿ ತಮ್ಮ ಜೀವನದ ಸಾರ್ಥಕ್ಯ ಕಂಡರೆ ಇನ್ನು ಕೆಲವರು ಇರುವ ಜಾಗದಲ್ಲೇ ಇರಲು ಸಂತೋಷ ಪಡುತ್ತಾರೆ. ಕೆಲವರು ದೊಡ್ಡ ದೊಡ್ಡ ಸಾಧನೆ ಮಾಡುವುದರಲ್ಲಿ ಸಂತೋಷ ಕಂಡರೆ ಇನ್ನು ಕೆಲವರು ಗಿರೀಶ್ ಕಾರ್ನಾಡ್‌ರು ತಮ್ಮ ಯಯಾತಿ ನಾಟಕದಲ್ಲಿ ಹೇಳಿದಂತೆ ಸಾಮಾನ್ಯರಿಗೆ ಸಾಮಾನ್ಯತೆಯೇ ಸಾಕು. ಬೆರಗಾಗಿಸುವ ಇನ್ನೊಂದು ವಿಷಯ ಅಂದರೆ ಮನುಷ್ಯನ ಸ್ವಂತ ಇಚ್ಛೆ, ಆಯ್ಕೆಗಳಲ್ಲೇ ಕಾಲ ಸರಿದಂತೆ ಎಷ್ಟು ಬದಲಾವಣೆ ಆಗುತ್ತದೆ ಅಂದರೆ, ಹತ್ತು ವರ್ಷಗಳ ಹಿಂದೆ ತುಂಬ ಇಷ್ಟ ಅನ್ನಿಸಿದ್ದ ವಿಷಯವು ಇವತ್ತು ಅವನಿಗೆ ಇಷ್ಟವಾಗದೆ ಹೋಗಬಹುದು! ದಿನ ಕಳೆದಂತೆ ಅವನ ಆದ್ಯತೆಗಳು ಬದಲಾಗಬಹುದು. ಜೀವನ ವಿವೇಕವನ್ನು ಬಹಳ ಸರಳವಾದ ಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ನುಡಿಯುತ್ತಿದ್ದ ಸಿದ್ಧೇಶ್ವರ ಸ್ವಾಮಿಗಳು ಒಮ್ಮೆ ಹೇಳಿದ್ದರು ಯಾವುದೂ ಇದ್ದಂಗಿರಲ್ಲ. ಹೌದಲ್ಲವೆ? ಬದುಕಿನ ಮಹಾಪ್ರಯಾಣದಲ್ಲಿ ಯಾವುದೂ ಇದ್ದಂಗಿರಲ್ಲ.



ಜೀವನದ ವೈಚಿತ್ರ್ಯ ಅಂದಾಗ ಗ್ರೀಕ್ ಪುರಾಣ ಕಥೆಗಳಲ್ಲಿ ಬರುವಂತಹ ಈಡಿಪಸ್ ರಾಜ ನೆನಪಾಗದೆ ಇರುವುದಿಲ್ಲ. ಪ್ರಾಚೀನ ನಾಟಕಕಾರ ಸಫೋಕ್ಲಿಸ್ ಈ ಕಥೆಯನ್ನು ದೊರೆ ಈಡಿಪಸ್ ಎಂಬ ಹೆಸರಿನ ಒಂದು ಅಮರ ನಾಟಕವಾಗಿಸಿದ್ದಾನೆ. ಈಡಿಪಸ್ ಹುಟ್ಟುವ ಮೊದಲೇ ಈ ಮಗುವು ದುರದೃಷ್ಟದ ಹರಿಕಾರ. ಇವನು ಮುಂದೆ ತನ್ನ ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗುತ್ತಾನೆ. ಎಂಬ ಮೈ ನಡುಗಿಸುವ ಭವಿಷ್ಯವಾಣಿ ಮೊಳಗಿರುತ್ತದೆ. ಮಗುವು ಹುಟ್ಟಿದ ತಕ್ಷಣ ಅದರ ತಂದೆಯು ಅದನ್ನು ಸಾಯಿಸಲು ವ್ಯವಸ್ಥೆ ಮಾಡಿದರೂ ವಿಧಿಲೀಲೆಯಿಂದ ಮಗುವು ಬದುಕುಳಿಯುತ್ತದೆ. ಬೇರೆ ರಾಜ್ಯದಲ್ಲಿ ಚೆನ್ನಾಗಿ ಬೆಳೆದು ಯುವಕನಾಗುತ್ತದೆ. ಈ ಯುವಕನು ತಾನು ಹುಟ್ಟಿದ ನಗರವನ್ನು ಕಾವಲು ಕಾಯುತ್ತಿದ್ದ ಸ್ಫಿಂಕ್ಸ್ ಕೇಳಿದ ಪ್ರಶ್ನೆಗೆ ಸರಿಯುತ್ತರ ನೀಡುತ್ತಾನೆ. ಮುಂದೆ ವಿಧಿ ಹೇಳಿದಂತೆಯೇ ಆಗುತ್ತದೆ. ತನ್ನ ನಿಜವಾದ ತಂದೆ ತಾಯಿ ಯಾರು ಎಂಬ ಗುರುತು ಗೊತ್ತಿರದ ಯುವಕ ತಂದೆಯನ್ನು ಒಂದು ಕ್ಷುಲ್ಲಕ ಜಗಳದ ನೆಪದಲ್ಲಿ ಕೊಲ್ಲುತ್ತಾನೆ, ಹಾಗೂ ಸ್ಫಿಂಕ್ಸ್ ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟದ್ದಕ್ಕಾಗಿ, ಆ ಊರಿಗೆ ರಾಜನಾಗಿ ಆ ರಾಜ್ಯದ ರಾಣಿಯನ್ನು ಅಂದರೆ ತನ್ನ ತಾಯಿಯನ್ನೇ ಮದುವೆ ಸಹ ಆಗುತ್ತಾನೆ! ತಾನೇ ಹಿಂದಿನ ರಾಜನನ್ನು ಕೊಂದಿದ್ದೇನೆಂಬ ಅರಿವಿಲ್ಲದೆ ರಾಜನನ್ನು ಕೊಂದವನಿಗಾಗಿ ಹುಡುಕುತ್ತಾನೆ! ಕೊನೆಗೆ, ಪೂಜಾರಿಯೊಬ್ಬನಿಂದ ನಿಜ ವೃತ್ತಾಂತವನ್ನು ಅರಿತು ಅತ್ಯಂತ ಆಘಾತಕ್ಕೊಳಗಾಗಿ ತಾನು ಮಾಡಿದ ಪಾಪಕಾರ್ಯಗಳಿಗೆ ಪ್ರಾಯಶ್ಚಿತ್ತವಾಗಿ ತನ್ನ ಕಣ್ಣನ್ನು ಕಿತ್ತಿಸಿಕೊಂಡು ರಾಜ್ಯ ಬಿಟ್ಟು ಸೈಬೀರಿಯಾದ ಮರುಭೂಮಿಗೆ ಹೊರಟುಹೋಗುತ್ತಾನೆ. ಇವನು ತನ್ನ ಮಗನೆಂಬ ಅರಿವಿಲ್ಲದೆ ಈ ಪಾಪದ ಭಾಗವಾದ ಅವನ ತಾಯಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಎಂತಹ ವಿಪರ್ಯಾಸ ನೋಡಿ! ಇಂದು ಮಹಾರಾಜನಾಗಿ ಮೆರೆಯುತ್ತಿದ್ದ ಈಡಿಪಸ್ ನಾಳೆ ಸೈಬೀರಿಯಾದ ಮರುಭೂಮಿಗಳಲ್ಲಿ ಕುರುಡನಾಗಿ ಅಲೆಯುವ ಪರಿಸ್ಥಿತಿ ಬರುತ್ತದೆ! ಬದುಕಿನ ಅನಿಶ್ಚಿತತೆ, ಮನುಷ್ಯನ ಬದುಕಿನಲ್ಲಿ ವಿಧಿಯು ಆಡುವ ಆಟ, ಎಷ್ಟೇ ಪ್ರಯತ್ನ ಮಾಡಿದರೂ ತನ್ನ ವಿಧಿಯಲ್ಲಿ ಬರೆದ ದುರಂತದಿಂತ ತಪ್ಪಿಸಿಕೊಳ್ಳಲಾಗದ ಮನುಷ್ಯನ ಅಸಹಾಯಕತೆ ಇವುಗಳನ್ನು ಈ ಮಹಾನ್ ನಾಟಕ ಮನೋಜ್ಞವಾಗಿ ಹೇಳುತ್ತದೆ. ಒಂದು ಸಂದರ್ಭದಲ್ಲಿ ಅಯ್ಯೋ, ದುರ್ವಿಧಿಯೇ? ನಾಳೆ ಎಂಬುದು ಏನೆಂದು ಗೊತ್ತಿರದ ಮನುಷ್ಯನ ಪಾಡೆ!! ಓಹ್. ಅಯ್ಯೋ .., ಸಾಯುವವರೆಗೂ ಯಾರನ್ನೂ ಸುಖಿ ಅನ್ನಬೇಡ ಎಂಬ ಮಾತನ್ನು ನಾಟಕಕಾರ ಸಫೋಕ್ಲಿಸ್ ಒಂದು ಎಚ್ಚರಿಕೆಯೆಂಬಂತೆ, ಒಂದು ಪಾತ್ರದ ಬಾಯಿಂದ ಹೇಳಿಸಿದ್ದಾನೆ. ಈ ನಾಟಕವನ್ನು ಓದಿದ ಅಥವಾ ಈ ಕತೆಯನ್ನು ಕೇಳಿದ ಯಾರಿಗೇ ಆದರೂ ನಮ್ಮ ಬದುಕಿನಲ್ಲಿ ನಮ್ಮ ಪಾತ್ರವೆಷ್ಟು? ವಿಧಿಯದೆಷ್ಟು? ಮನುಷ್ಯ ಎಂದರೆ ಏನು? ತನ್ನಿಚ್ಛೆಯನ್ನು ಎಷ್ಟು ಮಾತ್ರಕ್ಕೂ ನಡೆಸಲಾಗದವನೇ? ಕೇವಲ ವಿಧಿಯ ಕೈಗೊಂಬೆಯೇ ಅವನು? ಎಂಬ ಪ್ರಶ್ನೆಗಳು ಮನಸ್ಸಿಗೆ ಬರುತ್ತವೆ.



ಹ್ಮ್ಂ ವಿಧಿ! ಐದಾರು ವರ್ಷಗಳ ಮುಂಚೆ ತೀರಿಕೊಂಡ ನನ್ನ ಚಿಕ್ಕಮ್ಮ ನೆನಪಾಗುತ್ತಾರೆ. ನನ್ನ ತಾಯಿಯ ತಂಗಿ. ಚಿಕ್ಕಂದಿನಲ್ಲಿ ಬಹಳ ಬಡತನವಿದ್ದ ಮನೆ ಅವರದು. ಸಿಹಿತಿಂಡಿ, ಊಟ, ಚೆನ್ನಾಗಿ ಬಟ್ಟೆ ತೊಡುವುದು, ಒಡವೆ ಮಾಡಿಸಿಕೊಳ್ಳುವುದು ಮುಂತಾದ ಜೀವನದ ಸರಳಸಂಗತಿಗಳಲ್ಲಿ ಹೆಚ್ಚಿನ ರುಚಿ ಹೊಂದಿದ್ದ ಚಿಕ್ಕಮ್ಮನಿಗೆ ಅವರ ಬಡತನದ ಬಾಲ್ಯ, ಹದಿಹರೆಯಗಳು ಇವಕ್ಕೆ ಅವಕಾಶವನ್ನೇ ಕೊಟ್ಟಿರಲಿಲ್ಲ. ಸಣ್ಣಮಟ್ಟದ ಸರ್ಕಾರಿ ಉದ್ಯೋಗಿಯೊಬ್ಬರನ್ನು ಹಿರಿಯರು ನೋಡಿ ಮದುವೆ ಮಾಡಿದಾಗ ಈ ಚಿಕ್ಕಮ್ಮ ತಮ್ಮ ಕನಸುಗಳನ್ನು ಎದೆಯಲ್ಲಿಟ್ಟುಕೊಂಡೇ ಗಂಡನ ಮನೆಗೆ ಹೋದರು. ಗಂಡನ ಮನೆಯವರೂ ಅಂತಹ ಶ್ರೀಮಂತರೇನಲ್ಲ. ತೀರಾ ಹೊಟ್ಟೆಗಿಲ್ಲ ಎನ್ನುವ ಪರಿಸ್ಥಿತಿ ಇರಲಿಲ್ಲವಾದರೂ ಕೈಬಿಟ್ಟು ಹಣ ಖರ್ಚು ಮಾಡುವಂತೆಯೂ ಇರಲಿಲ್ಲ. ಮದುವೆಯಾಗುವಾಗ ಪಿಯುಸಿ ಮುಗಿಸಿದ್ದ ಚಿಕ್ಕಮ್ಮ (ಆ ಕಾಲದಲ್ಲಿ ಅಂದರೆ 1940-50ರ ವರ್ಷಗಳಲ್ಲಿ ಹೆಣ್ಣುಮಕ್ಕಳಿಗೆ ದೊಡ್ಡ ಓದು ಇದು!) ತಾನು ಕೆಲಸಕ್ಕೆ ಸೇರಿ ನಾಲ್ಕು ಕಾಸು ಸಂಪಾದಿಸುವ ಆಸೆ ಹೊತ್ತು, ತಾವಿದ್ದ ಹಳ್ಳಿಯಿಂದ ಇಪ್ಪತ್ತು ಕಿಲೊಮೀಟರ್ ದೂರ ಇದ್ದ ಪಟ್ಟಣವೊಂದರಲ್ಲಿ ನಡೆಯುತ್ತಿದ್ದ ಶಿಶುವಿಹಾರ ಶಿಕ್ಷಕಿಯರ ತರಬೇತಿಗೆ ಸೇರಿಕೊಂಡರು. ಕಷ್ಟಪಟ್ಟು ದಿನಾ ಬಸ್ಸಿನಲ್ಲಿ ಓಡಾಡಿ ತಿಂಗಳಾನುಗಟ್ಟಲೆ ಓದಿ ಆ ಶಿಕ್ಷಣವನ್ನು ಯಶಸ್ವಿಯಾಗಿ ಮುಗಿಸಿದರು. ನಾನು ಹೇಳುತ್ತಿರುವುದು ಸುಮಾರು ನಲವತ್ತು ವರ್ಷಗಳ ಹಿಂದಿನ ಮಾತು. ಸಾರಿಗೆ ಸಂಪರ್ಕ, ಸಂವಹನಗಳು ಇಷ್ಟೆಲ್ಲ ಮುಂದುವರಿಯದ ಆ ಕಾಲದಲ್ಲಿ, ಕೆಳ ಮಧ್ಯಮ ವರ್ಗದ ಒಬ್ಬ ಹೆಣ್ಣುಮಗಳಿಗೆ ಇದನ್ನು ಮಾಡುವುದು ಸುಲಭದ ಕೆಲಸವೇನಾಗಿರಲಿಲ್ಲ. ಹಾಗೂ ಛಲ ಬಿಡದೆ, ಶಿಕ್ಷಣ ಮುಗಿಸುತ್ತಿದ್ದಂತೆ ತಮ್ಮ ಊರಿನ ಶಾಲೆಯೊಂದರಲ್ಲಿ ಶಿಶುವಿಹಾರದ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದರು. ಅಲ್ಲಿ ಬರುತ್ತಿದ್ದುದು ಚಿಕ್ಕ ಸಂಬಳವಾದರೂ ಅದು ತಾನು ಕಷ್ಟಪಟ್ಟು ಸಂಪಾದಿಸಿದ ಹಣ ಎಂಬ ತೃಪ್ತಿ, ಸಂತೋಷ ಇದ್ದಿರಬೇಕು ಆ ಜೀವಕ್ಕೆ. ಈ ಹಂತದಿಂದ ಅವರ ಆರ್ಥಿಕ ಸ್ಥಿತಿಗತಿ ಕೊಂಚ ಸುಧಾರಿಸಿತು. ರೇಷ್ಮೆ ಸೀರೆ ಅಂಗಡಿ, ಚಿನ್ನದ ಒಡವೆಯ ಅಂಗಡಿಗಳಲ್ಲಿ ಚೀಟಿ ಕಟ್ಟಿ ಕಟ್ಟಿ ಒಂದಿಷ್ಟು ಸೀರೆ, ಒಡವೆ ಕೊಂಡರು. ತನ್ನ ಬಾಲ್ಯ, ಹದಿಹರೆಯಗಳಲ್ಲಿ ಬರೀ ಕೊರತೆ ಅನುಭವಿಸಿದ್ದ ಇವರು ಒಂದಿಷ್ಟು ಖುಷಿ ಪಡುವ ಕಾಲ ಬಂತಲ್ಲ ಎಂದು ನಾವು ನೆಂಟರಿಷ್ಟರು ಭಾವಿಸಿದೆವು. ಆದರೆ ನಮ್ಮ ಭಾವನೆ ಎಷ್ಟು ತಪ್ಪು ಎಂದು ನಮಗೆ ಬಹಳ ಬೇಗ ಗೊತ್ತಾಯಿತು.

ಕೇವಲ ನಲವತ್ತು ವಯಸ್ಸಿಗೆ ಈ ಚಿಕ್ಕಮ್ಮನಿಗೆ ತೀರಾ ತೀವ್ರ ಮಟ್ಟದ ಸಕ್ಕರೆ ಖಾಯಿಲೆ ಬಂದುಬಿಟ್ಟಿತು! ಆಸ್ಪತ್ರೆಗಳಿಗೆ ತಿರುಗುವುದು, ರಕ್ತಪರೀಕ್ಷೆ ಮಾಡಿಸುತ್ತಿರುವುದು, ಹೊತ್ತು ಹೊತ್ತಿಗೆ ಮಾತ್ರೆಗಳ ಸಾಲು, ಅದು ತಿನ್ನಬೇಡ, ಇದು ತಿನ್ನಬೇಡ ಎಂಬ ಭಯಂಕರ ಪಥ್ಯ ಇವು ಪ್ರಾರಂಭ ಆಗಿ ಈ ಕಸರತ್ತಿನಲ್ಲಿ ಇವರ ಆರೋಗ್ಯ ಇನ್ನಷ್ಟು ಬಿಗಡಾಯಿಸಿತೇ ಹೊರತು ಉತ್ತಮಗೊಳ್ಳಲಿಲ್ಲ. ಖಾಯಿಲೆ ಎಷ್ಟರ ಮಟ್ಟಿಗೆ ಹೆಚ್ಚಾಯಿತೆಂದರೆ ಪ್ರತಿದಿನ ಬೆಳಿಗ್ಗೆ-ಸಂಜೆ ಇನ್ಸುಲಿನ್ ಚುಚ್ಚುಮದ್ದು ತೆಗೆದುಕೊಳ್ಳುವ ಹಂತಕ್ಕೆ ಬಂತು. ಹಬ್ಬಕ್ಕೋ ಇನ್ಯಾವುದಾದರೂ ಸಂದರ್ಭಕ್ಕೋ ನಮ್ಮ ಮನೆಗೆ ಬಂದಾಗ ಬೆಳಿಗ್ಗೆ-ಸಂಜೆ ಚುಚ್ಚಿಸಿಕೊಳ್ಳುವ ಅವರ ಪಾಡು, ಗೋಳಾಟ ನೋಡುವಾಗ ಬಹಳ ಬೇಸರವಾಗುತ್ತಿತ್ತು ನನಗೆ. ಎಲ್ಲಕ್ಕಿಂತ ಹೆಚ್ಚು ಬೇಸರ ಅಂದರೆ ಸಿಹಿ ತಿನ್ನುವುದು, ಅಚ್ಚುಕಟ್ಟಾಗಿ ಊಟ ಮಾಡುವುದು, ಉಟ್ಟು ತೊಟ್ಟು ಓಡಾಡಿಕೊಂಡಿರುವುದು.. ಇಂತಹ ಸರಳ ಖುಷಿಗಳಿಗಾಗಿ ಜೀವನ ಪೂರ್ತಿ ಆಸೆ ಪಟ್ಟ ಚಿಕ್ಕಮ್ಮ, ಅವೆಲ್ಲವೂ ತಮ್ಮ ವಶದಲ್ಲೇ ಇರುವ ಹಂತಕ್ಕೆ ಬಂದರೂ ಅವುಗಳನ್ನು ಸವಿಯಲು ಸಾಧ್ಯ ಆಗಲಿಲ್ಲ. ನೋಡು ಮೀರಾ, ಚಿಕ್ಕವಳಿದ್ದಾಗ ಆರೋಗ್ಯ ಇತ್ತು, ಊಟ-ವಸ್ತು-ಒಡವೆ ಇರಲಿಲ್ಲ. ಈಗ ಊಟ-ವಸ್ತು-ಒಡವೆ ಇದೆ, ಆದ್ರೆ ಆರೋಗ್ಯವೇ ಇಲ್ಲ. ಹೀಗಿದೆ ಕಣಮ್ಮ ನನ್ನ ಹಣೆಬರಹ ಎಂದು ತುಂಬ ನೊಂದುಕೊಳ್ಳುತ್ತಿದ್ದರು. ಅಯ್ಯೋ, ಬದುಕಿನ ವಿಪರ್ಯಾಸವೆ! ಹಲ್ಲಿದ್ರೆ ಕಡಲೆ ಇಲ್ಲ, ಕಡಲೆ ಇದ್ರೆ ಹಲ್ಲಿಲ್ಲ ಅಂತ ಆಯ್ತಲ್ಲಾ ಅನ್ನಿಸಿ ನಾನು ನಿಟ್ಟುಸಿರು ಬಿಡುತ್ತಿದ್ದೆ. ಚಿಕ್ಕಮ್ಮನಿಗೆ ಸಮಾಧಾನ ಹೇಳಲು ಪದಗಳಿಲ್ಲದೆ ಸುಮ್ಮನಾಗುವ ಪರಿಸ್ಥಿತಿ ಬರುತ್ತಿತ್ತು. ಏನೋ ವಿಷಯಾಂತರ ಮಾಡಿ ಆ ನೋವಿನ ಮಾತನ್ನು ಆ ಕ್ಷಣಕ್ಕೆ ನಿಲ್ಲಿಸುವಂತೆ ಮಾಡುತ್ತಿದ್ದೆ. ಆದರೆ ಬದುಕಿನ ಈ ಬ್ರಹ್ಮಗಂಟನ್ನು ಬಿಡಿಸಲು ಯಾರಿಗೆ ಸಾಧ್ಯ ಹೇಳಿ.

ಇನ್ನು ನಾವು ಮಾಡಿದ ಸಾಧನೆಗಳ ಬಗೆಗಿನ ಶಾಶ್ವತತೆಯ ಭ್ರಮೆಯಲ್ಲಿ ಬದುಕೋಣವೆ? ರಾಜ್ಯ ಸಾಮ್ರಾಜ್ಯಗಳನ್ನು ಕಟ್ಟಿ ಮೆರೆದು ಮೆಟ್ಟಿಂಗಾಲಿಟ್ಟು ತಾನೇ ದೊಡ್ಡವನು ಎಂದು ಬೀಗಿದ ರಾಜಮಹಾರಾಜರು ಮಣ್ಣಲ್ಲಿ ಮಣ್ಣಾಗಿ ಹೋಗಿದ್ದಾರೆ. ಬದುಕು ಹೀಗೇ ಇರುತ್ತೆ, ನಾಳೆಗಳು ಹೀಗೆಯೇ ಜರುಗುತ್ತವೆ ಎಂದು ಹೇಳಲು ಯಾರಿಗೆ ತಾನೆ ಗೊತ್ತು? ಹಾಗೆಂದು ನಿನ್ನೆಗಳ ಬಗ್ಗೆ ಕೊರಗುತ್ತಾ ಕೂರುವುದು ಬದುಕೆ? ಅಲ್ಲ. ಬಹುಶಃ ಸದ್ಯತನ ಅಂದರೆ ವರ್ತಮಾನದಲ್ಲಿ ಮನಸ್ಸಿಟ್ಟು ಅದನ್ನು ಮನಸಾರೆ ಅನುಭವಿಸುವುದು ಮತ್ತು ಬದುಕೆಂಬ ಶಿಕ್ಷಕನಿಂದ ಕಲಿಯುವ ವಿನಯ ಇವೆರಡೇ ನಮಗೆ ಕೊನೆಗೂ ಸಹಾಯ ಮಾಡುವುದು ಅನ್ನಿಸುತ್ತೆ. ಹೀಗಾಗಿ ಶಿಕ್ಷಕರ ದಿನಾಚರಣೆಯಂದು ಎಲ್ಲರೂ ತಮ್ಮ ತಮ್ಮ ಶಿಕ್ಷಕರಿಗೆ ನಮಿಸುತ್ತಾರಾದರೆ, ಶಿಕ್ಷಕರು ನಮಿಸುವುದು ತಮಗೆ ಪಾಠ ಮಾಡಿದ ಶಿಕ್ಷಕರಿಗೆ ಹಾಗೂ ಅತಿಮುಖ್ಯವಾಗಿ ಜೀವನವೆಂಬ ಮಹಾಶಿಕ್ಷಕನಿಗೆ.

**- ಎಲ್.ಜಿ.**ಮೀರಾ

## ಟ್ರ್ಯಾಕ್ಟರ್

ಗದ್ದೆಯಲ್ಲಿ ಓಡುತ್ತಿದ್ದ ಟ್ರ್ಯಾಕ್ಟರ್ ಗದ್ದೆಯನ್ನು ಬಿಟ್ಟು ಡಾಂಬರು ರಸ್ತೆಗೇರಿದೆ. ಹಳ್ಳಿಯಲ್ಲಿ ತಿರುಗಾಡಿದ ಟ್ರ್ಯಾಕ್ಟರ್ ದಿಕ್ಕು ಬದಲಿಸಿ ಪೇಟೆಯ ಕಡೆಗೆ ಪಯಣ ಬೆಳೆಸಿದೆ. ಹಸಿರಿನ ನಡುವೆ ಸಾಗುತ್ತಿದ್ದ ಟ್ರ್ಯಾಕ್ಟರ್‌ನ ಗಾಲಿಗಳು ಇಂದು ಜಲ್ಲಿ ಸಿಮೆಂಟ್ ಹಳೆಯ ವಸ್ತುಗಳನ್ನು ಸಾಗಿಸುವುದಕ್ಕೆ ಪೇಟೆಯ ನಡುವೆ ಪರದಾಡುತ್ತಿದೆ. ಕೆಲವೊಂದು ಸಲ ಇಡೀ ಊರನ್ನೇ ತನ್ನ ಮೇಲೆ ಹೊತ್ತು ಪೇಟೆಯ ನಡುವಿನಲ್ಲಿ ಸಾಗುತ್ತಿದೆ. ಅಲ್ಲಿ ಬದುಕು ಕಟ್ಟಿಕೊಳ್ಳುವುದಕ್ಕೆ ಕಷ್ಟ ಕಂಡವರು ಇಂದು ಕುಟುಂಬ ಸಮೇತರಾಗಿ ಪೇಟೆಯ ದೊಡ್ಡ ಕಾಂಕ್ರೀಟ್ ಕಾಡಿನೊಳಕ್ಕೆ ನುಗ್ಗಿ ಬಿಟ್ಟಿದ್ದಾರೆ. ಅಲ್ಲಿ ಉಪವಾಸದಿಂದ ನೀರು ಕುಡಿಯುವುದಕ್ಕಿಂತ ಇಲ್ಲಿ ಒಂದು ಹೊತ್ತಿನ ಊಟ ಮಾಡುವ ಆಸೆ .ಅಲ್ಲಿ ಮನುಷ್ಯತ್ವವಿತ್ತು ಇಲ್ಲಿ ಹಣ ಮಾತ್ರ ಬದುಕುತ್ತದೆ. ಒಟ್ಟಿನಲ್ಲಿ ಬೇಸಾಯ ಮಾಡಬೇಕಿದ್ದ ಗದ್ದೆ ಟ್ರ್ಯಾಕ್ಟರ್ ಪೇಟೆಯ ನಡುವೆ ಓಡುವಾಗಲೇ ಹಳ್ಳಿಯ ಪರಿಸ್ಥಿತಿ ಚಿಂತಾಜನಕವಾಗಿದೆ ಅನ್ನೋದು ಅರ್ಥವಾಯಿತು. ಓಡುವುದಕ್ಕೆ ಬೇಸರವಾದರೂ ಟ್ರ್ಯಾಕ್ಟರ್ ಏನೂ ಮಾಡುವ ಪರಿಸ್ಥಿತಿಯಲ್ಲಿಲ್ಲ. ತಾನು ಓಡಿದರೆ ಮಾತ್ರ ತನ್ನನ್ನು ಓಡಿಸುವವರು ಬದುಕುತ್ತಾರೆ ಅನ್ನೋದು ಅದಕ್ಕೂ ಗೊತ್ತಿತ್ತು.

**- ಧೀರಜ್** ಬೆಳ್ಳಾರೆ



## ಚಾಲಕ-ನಿರ್ವಾಹಕರು ಎಲ್ಲದಕ್ಕೂ ಹೊಣೆಯಲ್ಲ

ಬಿಎಂಟಿಸಿ ವಿರುದ್ಧ 10 ಸಾವಿರ ದೂರು ಮುಖಪುಟ ವರದಿಯನ್ನು (ಸೆ.5) ಓದಿದ ನಂತರ, ಒಂದಷ್ಟು ಕಹಿವಾಸ್ತವವನ್ನು ತಿಳಿಸುವ ಸಲುವಾಗಿ ಈ ಬರಹ. ನಾನು ಬಿಂಎಂಟಿಸಿ ಬಸ್‌ನಲ್ಲಿ 35 ವರ್ಷಗಳಿಂದ ಪ್ರಯಾಣಿಸುತ್ತಿದ್ದೇನೆ. ಇದರಲ್ಲಿ ಯಾರದು ತಪ್ಪು, ಯಾರದು ಸರಿ ಎಂಬುದನ್ನು ಖಚಿತವಾಗಿ ವಿಶ್ಲೇಷಿಸುವಷ್ಟು ವಿಷಯಗಳು ನನ್ನಲ್ಲಿವೆ.

ಈಗ ಹೆಣ್ಣು ಮಕ್ಕಳಿಗೆ ಉಚಿತ ಪ್ರಯಾಣದ ಸೌಲಭ್ಯ ಇರುವುದರಿಂದ ಬಸ್ಸುಗಳಲ್ಲಿ ಅವರ ಸಂಖ್ಯೆ ವಿಪರೀತ ಹೆಚ್ಚಾಗಿದೆ. ಇದರಿಂದಾಗಿ ನಿರ್ವಾಹಕರಿಗೆ ಶೂನ್ಯ ಟಿಕೆಟ್ ಕೊಡಲು ಸಮಯ ಸಾಲುತ್ತಿಲ್ಲ. ಅಷ್ಟರಲ್ಲಿ ಇನ್ನೊಂದು ಸ್ಟೇಜ್ ಬಂದು ಬಿಡುತ್ತದೆ. ಕೆಲ ಹೆಣ್ಣು ಮಕ್ಕಳೂ ಆಧಾರ್ ಕಾರ್ಡ್ ಅಥವಾ ಮತದಾರರ ಚೀಟಿ ತೋರಿಸುವ ತಮ್ಮ ಹೊಣೆಗಾರಿಕೆಯ ನಿರ್ವಹಣೆಯನ್ನು ನಿರ್ಲಕ್ಷ್ಯ ಮಾಡುತ್ತಾರೆ, ಕೆಲವೊಮ್ಮೆ ಮೊಬೈಲ್‌ನಲ್ಲೇ ಮುಳುಗಿರುತ್ತಾರೆ.

ಟಿಕೆಟ್ ಕೊಡುವ/ಪಡೆಯುವ ಪ್ರಕ್ರಿಯೆ ತಡವಾದಲ್ಲಿ, ಮುಂದಿನ ಸ್ಟೇಜ್‌ನಲ್ಲಿ ಚೆಕಿಂಗ್ ಸ್ಕ್ವಾಡ್ ಬಂದಾಗ, ನಿರ್ವಾಹಕರು ಮೆಮೋ ಪಡೆಯಬೇಕಾಗುತ್ತದೆ ಅಥವಾ ದಂಡವನ್ನು ಪೀಕಬೇಕಾಗುತ್ತದೆ. ಇದನ್ನು ಹೆಣ್ಣುಮಕ್ಕಳು ಅರ್ಥಮಾಡಿಕೊಳ್ಳುವುದಿಲ್ಲ, ಕೆಲವೊಮ್ಮೆ, ಟಿಕೆಟ್ ಪಡೆದ ಉದ್ದೇಶಿತ ನಿಲ್ದಾಣಗಳಲ್ಲಿ ಇಳಿಯದೇ, ತಮ್ಮ ಅನುಕೂಲಕ್ಕೆ ಇನ್ನೆಲ್ಲೋ ಇಳಿಯುತ್ತಾರೆ. ಕೇಳಿದರೆ, ಫ್ರೀ ತಾನೇ? ನಿಮಗೇನು ಕಷ್ಟ? ನಾವು ಎಲ್ಲಾದರೂ ಇಳಿಯಬಹುದು ಎಂಬ ಉಡಾಫೆಯ ಉತ್ತರ ಬರುತ್ತದೆ. ಅವರಿಗೆ ಅರ್ಥಮಾಡಿಸಲು ನಿರ್ವಾಹಕರು ಹೆಣಗುತ್ತಿರುತ್ತಾರೆ.




ಇದನ್ನು ಚೆಕಿಂಗ್ ಅಧಿಕಾರಿಗಳೂ ಅರ್ಥಮಾಡಿಕೊಳ್ಳಬೇಕು, ಪ್ರತಿಬಾರಿಯೂ ನಿರ್ವಾಹಕರದ್ದೇ ತಪ್ಪಿರುವುದಿಲ್ಲ. ಶಕ್ತಿ ಯೋಜನೆಯಿಂದಾಗಿ ಬಸಿ ಬಸ್ಸಿನಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ಹೆಚ್ಚಾಗಿ, ಎಲ್ಲಾ ಆಸನಗಳನ್ನೂ ಆಕ್ರಮಿಸಿಕೊಳ್ಳುತ್ತಿದ್ದಾರೆ.

ಇದರಿಂದಾಗಿ ಗಂಡಸರು ನಿಂತು ಪಯಣಿಸುವಂತಾಗಿದೆ ಹಾಗೂ ಬಸ್ಸುಗಳಲ್ಲಿ ಜಗಳ ಹೆಚ್ಚಾಗಿದೆ. ಇದನ್ನು ಸುಧಾರಿಸುವ ಹೊಣೆಯೂ ನಿರ್ವಾಹಕರ ಮೇಲೆಯೇ. ಎಷ್ಟೋ ಕಡೆ ಬಹಳ ಹಳೆಯ ಬಸ್‌ಗಳಿವೆ, ಅದರಲ್ಲಿನ ಸಮಸ್ಯೆಗಳನ್ನೆಲ್ಲಾ ಸುಧಾರಿಸಿಕೊಂಡು ಚಾಲಕರು ಕಾರ್ಯನಿರ್ವಹಿಸುತ್ತಾರೆ. ಸಂಚಾರ ದಟ್ಟಣೆಯಿಂದಾಗಿ ಎಷ್ಟೋ ಬಾರಿ ಚಾಲಕ-ನಿರ್ವಾಹಕರಿಗೆ ಸಮಯಕ್ಕೆ ಸರಿಯಾಗಿ ಊಟ ಮಾಡಲೂ ಆಗುವುದಿಲ್ಲ.

ಏಕೆಂದರೆ, ಸಕಾಲಕ್ಕೆ ನಿರ್ದಿಷ್ಟ ನಿಲ್ದಾಣವನ್ನು ತಲುಪದಿದ್ದರೆ ಅದಕ್ಕೂ ಪ್ರಯಾಣಿಕರು ದೂರು ಕೊಡುತ್ತಾರಲ್ಲಾ! ಹೀಗೆ ಚಾಲಕರು-ನಿರ್ವಾಹಕರ ಕಷ್ಟಗಳನ್ನೂ ನಾವು ಅರ್ಥಮಾಡಿಕೊಳ್ಳಬೇಕು. ಗುಂಡಿಬಿದ್ದ ರಸ್ತೆಗಳಲ್ಲಿ ಸಂಚರಿಸುವ ವಾಹನ ಸವಾರರು, ಅದನ್ನು ತಪ್ಪಿಸಲು ಇದ್ದಕ್ಕಿದ್ದಂತೆ ಪಕ್ಕಕ್ಕೆ ಸರಿಯುತ್ತಾರೆ. ಆಗ ಹಿಂದೆ ಬರುತ್ತಿರುವ ಬಸ್ಸುಗಳ ಚಾಲಕರಿಗೆ ಕಂಟ್ರೋಲ್ ಮಾಡುವುದು ಕಷ್ಟವಾಗುತ್ತದೆ, ಅಪಘಾತಗಳಾಗುತ್ತವೆ.

ಹೀಗಾಗಿ ಮೊದಲು ರಸ್ತೆಗಳು ಸರಿಯಾಗಬೇಕು. ಇನ್ನು, ರಾತ್ರಿ ವೇಳೆ ಬಸ್ಸುಗಳಲ್ಲಿ ಮಲಗುವ ಚಾಲಕ-ನಿರ್ವಾಹಕರಿಗೆ ಸರಿಯಾದ ವ್ಯವಸ್ಥೆಯಾಗಲೀ ಭದ್ರತೆಯಾಗಲೀ ಇರುವುದಿಲ್ಲ. ತಮಗಿರುವ ಕೆಲಸದ ಒತ್ತಡದಿಂದಾಗಿ ಇಂಥ ಎಷ್ಟೋ ಸಿಬ್ಬಂದಿ ಆರೋಗ್ಯ ಸಮಸ್ಯೆಗಳಿಗೆ ಬಲಿಯಾಗಿದ್ದಾರೆ.

ಕೆಲವು ಸೂಕ್ಷ್ಮ ವಿಷಯಗಳು ಎಲ್ಲರಿಗೂ ಅರ್ಥವಾಗುವುದಿಲ್ಲ. ಹೀಗಾಗಿ, ಯಾರೇ ಆಗಲಿ ಸಾರಿಗೆ ಸಿಬ್ಬಂದಿಯ ಮೇಲೆ ದೂರು ನೀಡುವ ಮೊದಲು ಸ್ವಲ್ಪ ಯೋಚಿಸಬೇಕು. ಕೈಯಲ್ಲಿ ಮೊಬೈಲಿದೆ, ನಂಬರ್ ಸಿಗುತ್ತದೆ ಎಂಬ ಘಮಂಡಿತನದಲ್ಲಿ ದೂರು ನೀಡುವುದು ತರವೇ? ಮೇಲೆ ಉಲ್ಲೇಖಿಸಿದ ವ್ಯವಸ್ಥೆಗಳು ಮೊದಲು ಸರಿಯಾಗಬೇಕು. ಯಾರೇ ದೂರು ನೀಡಿದರೂ, ಅಧಿಕಾರಿಗಳು ಅದನ್ನು ಸರಿಯಾದ ರೀತಿಯಲ್ಲಿ ವಿವೇಚಿಸಿ, ತನಿಖೆ ಮಾಡಿ ಯಥೋಚಿತ ಕ್ರಮ ಕೈಗೊಳ್ಳಬೇಕೇ ಹೊರತು, ಎಲ್ಲಾ ದೂರುಗಳಿಗೂ ಚಾಲಕ- ನಿರ್ವಾಹಕರನ್ನು ಹೊಣೆ ಮಾಡುವುದು ಸರಿಯಲ್ಲ.

**- ಸುಜಯ ಆರ್.** ಕಣ್ಣೂರ್

## ದಸರಾ ಉದ್ಘಾಟಕರ ಆಯ್ಕೆ: ಕೋರ್ಟ್ ಮೆಟ್ಟಿಲೇರಿದ ಪ್ರತಾಪ್ ಸಿಂಹ

• ಪ್ರಜೋದಯ ವರದಿ



**ಬೆಂಗಳೂರು:** ನಾಡ ಹಬ್ಬ ಮೈಸೂರು ದಸರಾ ಉದ್ಘಾಟನೆಗೆ ಸಾಹಿತಿ ಬಾನು ಮುಷ್ತಾಕ್ ಅವರಿಗೆ ನೀಡಿದ ಆಹ್ವಾನ ವಾಪಾಸ್ ಪಡೆಯುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಮಾಜಿ ಸಂಸದ ಪ್ರತಾಪ್ ಸಿಂಹ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ದಸರಾ ಉದ್ಘಾಟನೆ ವೇಳೆ ಚಾಮುಂಡೇಶ್ವರಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಬೇಕು. ವೇದ ಮಂತ್ರ, ಧಾರ್ಮಿಕ ಆಚರಣೆಗಳ ಸಂಪ್ರದಾಯವಿದೆ. ಬಾನು ಮುಷ್ತಾಕ್ ಹಿಂದೂ ಹಾಗು ಕನ್ನಡ ವಿರೋಧಿ ಭಾವನೆ ಹೊಂದಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರ ಏಕಪಕ್ಷೀಯವಾಗಿ ಬಾನು ಮುಷ್ತಾಕ್ ಅವರ ಆಯ್ಕೆ ಮಾಡಿದೆಯೆಂದು ಪ್ರತಾಪ್ ಸಿಂಹ ಆರೋಪಿಸಿದ್ದಾರೆ.

ಮೈಸೂರಿನ ರಾಜಮನೆತನವು ಸರ್ಕಾರದ ನಡೆ ವಿರೋಧಿಸಿದೆ. ಸರ್ಕಾರದ ನಿರ್ಧಾರದಿಂದ ಹಿಂದೂಗಳ ಭಾವನೆಗೆ ಘಾಸಿ ಉಂಟಾಗಿದೆ. ಹೀಗಾಗಿ ಬಾನು ಮುಷ್ತಾಕ್ ಅವರಿಗೆ ನೀಡಿದ ಆಹ್ವಾನ ಹಿಂಪಡೆಯುವಂತೆ ನಿರ್ದೇಶಿಸುವಂತೆ ಮನವಿ ಮಾಡಿದ್ದಾರೆ.

ಮತ್ತೊಂದೆಡೆ ವಿಜಯಪುರದ ಆಲಮಟ್ಟಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪ್ರತಾಪ್ ಸಿಂಹ ನ್ಯಾಯಾಲಯ ಬಾಗಿಲು ತಟ್ಟಿರುವುದು ಸಂತೋಷ. ನಾವು ಕೂಡ ಕಾನೂನು ಹೋರಾಟ ಮಾಡುತ್ತೇವೆ. ಅದರಲ್ಲಿ ರಾಜ ಕೀಯ ಹೋರಾಟ ಮಾಡಿದರೆ ಎಲ್ಲದಕ್ಕೂ ನಾವು ಉತ್ತರ ನೀಡುತ್ತೇವೆಂದು ಹೇಳಿದರು. ಈ ಹಿಂದೆ ನಿಸಾರ್ ಅಹಮದ್ ದಸರಾ ಉದ್ಘಾಟನೆ ಮಾಡಿದಾಗ ಯಾಕೆ ವಿರೋಧಿಸಲಿಲ್ಲ. ಟಿಪ್ಪು ಸುಲ್ತಾನ್ ಸಹ ದಸರಾ ಆಚರಣೆ ಮಾಡಿದ್ದರಲ್ಲವೇಯೆಂದು ಪ್ರಶ್ನಿಸಿದರು.

# ಜನಾರ್ದನ ರೆಡ್ಡಿ ವಿರುದ್ಧ ಮಾನನಷ್ಟ ಮೊಕದ್ದಮೆ

## ಧರ್ಮಸ್ಥಳಕ್ಕೆ ಕಳಂಕ ತಂದರೆಂಬ ಹೇಳಿಕೆ | ಕೋರ್ಟ್ ಮೆಟ್ಟಿಲೇರಿದ ಸಂಸದ ಸೆಂಥಿಲ್

• ಪ್ರಜೋದಯ ವರದಿ

**ಬೆಂಗಳೂರು:** ಧರ್ಮಸ್ಥಳಕ್ಕೆ ಕಳಂಕ ತರುವ ಪಿತೂರಿಯ ಹಿಂದಿನ ರೂವಾರಿ ಶಶಿಕಾಂತ ಸೆಂಥಿಲ್ ಎಂದು ಆರೋಪಿಸಿದ್ದ ಗಂಗಾವತಿ ಕ್ಷೇತ್ರದ ಶಾಸಕ ಗಾಲಿ ಜನಾರ್ದನ ರೆಡ್ಡಿ ವಿರುದ್ಧ ತಮಿಳುನಾಡಿನ ತಿರುವಳ್ಳೂರು ಕ್ಷೇತ್ರದ ಕಾಂಗ್ರೆಸ್ ಸಂಸದ ಶಶಿಕಾಂತ ಸೆಂಥಿಲ್ ಬೆಂಗಳೂರಿನಲ್ಲಿ ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದಾರೆ.

ಈ ಸಂಬಂಧ, ಶಾಸಕರು, ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ತಮ್ಮ ವಕೀಲರ ಮೂಲಕ ಬೆಳಿಗ್ಗೆ ಖುದ್ದು ಹಾಜರಾ ಗಿದ್ದರು. ಶಶಿಕಾಂತ ಸೆಂಥಿಲ್ ಪರ ಹಾಜರಾಗಿದ್ದ ಹೈಕೋರ್ಟ್ ವಕೀಲರಾದ ಸೂರ್ಯ ಮುಕುಂದರಾಜ್ ಮತ್ತು ಸಂಜಯ ಯಾದವ್, ದೂರನ್ನು ದಾಖಲು ಮಾಡಿಕೊಳ್ಳುವಂತೆ ಮ್ಯಾಜಿಸ್ಟ್ರೇಟ್ ಕೆ.ಎನ್. ಶಿವಕುಮಾರ್ ಅವರಿಗೆ ಮನವಿ ಮಾಡಿದರು. ಅದನ್ನು ಮಾನ್ಯ ಮಾಡಿದ ನ್ಯಾಯಾಧೀಶರು ಇದೇ 11ಕ್ಕೆ ದೂರಿನ ವಿಚಾರಣೆ ನಡೆಸಲು ಮುದ್ದತು ನಿಗದಪಡಿಸಿ ಮುಂದೂಡಿದರು.

**ಆಧಾರ ರಹಿತ ಆರೋಪ:** ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಸೆಂಥಿಲ್, ಜನಾರ್ದನ ರೆಡ್ಡಿ ಅವರು ರಾಜಕೀಯ ದುರುದ್ದೇಶದಿಂದ ನನ್ನ ಹೆಸರನ್ನು ಉಲ್ಲೇಖಿಸಿ ಆಧಾರ ರಹಿತ ಸುಳ್ಳು ಆರೋಪ ಮಾಡಿದ್ದಾರೆಂದರು.

ಈ ಪ್ರಕರಣದಲ್ಲಿ ನನ್ನ ಹೆಸರನ್ನು ಪ್ರತಿನಿತ್ಯವೂ ಎಳೆದು ತರಲಾಗುತ್ತಿದೆ. ಅದರ ಹಿಂದೆ ರಾಜಕೀಯ ದುರುದ್ದೇಶ ಅಡಗಿದೆ. ನಾನು ಬಲಪಂಥೀಯ ಚಟುವಟಿಕೆಗಳ ಬಗ್ಗೆ



ಹೊಂದಿರುವ ನಿಲುವಿನಿಂದಾಗಿಯೇ ಕೆಲವರು ಇಂತಹ ಗುಲ್ಲೆಬ್ಬಿಸುತ್ತಿದ್ದಾರೆ. ಕರ್ನಾಟಕದ ಜನರಿಗೆ ಟೋಪಿ ಹಾಕುತ್ತಿದ್ದಾರೆ. ಜನಾರ್ದನ ರೆಡ್ಡಿ ಗಣಿ ಲೂಟಿ ಹೊಡೆದ ವ್ಯಕ್ತಿ. ಆತ ನ್ಯಾಯಮೂರ್ತಿಗಳನ್ನೇ ಬಿಟ್ಟಿಲ್ಲ ಎಂದು ದೂರಿದರು.

ಕರ್ನಾಟಕ ಕೇಡರ್‌ನ ಮಾಜಿ ಐಎಎಸ್ ಅಧಿಕಾರಿಯೂ ಆಗಿರುವ ಶಶಿಕಾಂತ ಸೆಂಥಿಲ್, ಧರ್ಮಸ್ಥಳದಲ್ಲಿ ಶವಗಳನ್ನು ದಫನ್ ಮಾಡಲಾಗಿದೆಯೆಂಬ ಆರೋಪದಡಿ ಬುರುಡೆ ತೋರಿ ಸುತ್ತಿರುವವರು ದೆಹಲಿಯಲ್ಲಿ ನಿಮ್ಮ ಮನೆಗೆ ಬಂದಿದ್ದರಂತಲ್ಲಾ ಎಂಬ ಪ್ರಶ್ನೆಯೊಂದಕ್ಕೆ ಉತ್ತರಿಸಿ, ಈತನಕ ನನಗೆ ದೆಹಲಿಯಲ್ಲಿ ಮನೆಯೇ ಇಲ್ಲ. ನಾನಿನ್ನೂ ತಮಿಳುನಾಡು ಭವನ ದಲ್ಲೇ ಇದ್ದೇನೆಂದರು.

ನನ್ನನ್ನು ಕ್ರಿಶ್ಚಿಯನ್ ಎಂದು ಪ್ರಚಾರ ಮಾಡಲಾ ಗುತ್ತಿದೆ. ಅಸಲಿಗೆ ಸುಬ್ರಹ್ಮಣ್ಯನ ಮತ್ತೊಂದು ಹೆಸರೇ ಸೆಂಥಿಲ್ ಎಂಬುದು ಇವರಿಗೆ ಗೊತ್ತಿಲ್ಲ ಎಂದ ಅವರು, ನನ್ನ ವಿರುದ್ಧ ಯಾರೇ ಆಗಲಿ ಯಾವುದೇ ರೀತಿ ಇಲ್ಲಸಲ್ಲದ ಆರೋಪ ಮಾಡಿದರೆ ಅಂಥವರ ವಿರುದ್ಧ ನಾನು ಖಂಡಿತ ವಾಗಿಯೂ ಸೂಕ್ತ ಕಾನೂನು ಕ್ರಮ ಕೈಗೊಳ್ಳುತ್ತೇನೆಂದು ಎಚ್ಚರಿಸಿದರು.

### ಕಾನೂನು ಹೋರಾಟ ಮಾಡುವೆ

ಧರ್ಮಸ್ಥಳದ ಬಗ್ಗೆ ಅಪಪ್ರಚಾರದಲ್ಲಿ ಎಡಪಂಥೀ ಯರು ಭಾಗಿಯಾಗಿದ್ದಾರೆಂದು ಹೇಳಿದ್ದೆ. ಬಳ್ಳಾರಿ ಮೂಲದ ಯುಟ್ಯೂಬರ್ ಸಮೀರ್ ಎಂಬಾತನಿಂದ ಅಪಪ್ರಚಾರ ಮಾಡಿಸಿದ್ದಾರೆ. ಇದೊಂದು ಷಡ್ಯಂತ್ರ ಎಂದು ಮಾಜಿ ಸಚಿವ ಜಿ.ಜನಾರ್ದನ ರೆಡ್ಡಿ ಪುನರುಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಎಲ್ಲದಕ್ಕೂ ಮೂಲ ತಮಿಳುನಾಡಿನ ಕಾಂಗ್ರೆಸ್ ಸಂಸದ ಶಶಿಕಾಂತ್ ಸೆಂಥಿಲ್. ಮುಸುಕುಧಾರಿ ಚಿನ್ನಯ್ಯನ ಮೂಲ ತಮಿಳು ನಾಡು. ಬಲಪಂಥೀಯ, ಹಿಂದೂಗಳ ವಿರುದ್ಧ ಮಾತನಾಡಿದ್ದ ಸೆಂಥಿಲ್ ಕಾಂಗ್ರೆಸ್‌ನಲ್ಲಿದ್ದಾರೆಂದು ಆರೋಪಿಸಿದರು.

ಶಶಿಕಾಂತ್ ಸೆಂಥಿಲ್ ನನ್ನ ವಿರುದ್ಧ ಮಾನನಷ್ಟ ಮೊಕ ದ್ದಮೆ ಹೂಡಿದ್ದು, ಅದರ ವಿರುದ್ಧ ಹೋರಾಡುವೆ. ಇಂತಹ ಅದೆಷ್ಟೋ ಮಾನನಷ್ಟ ಮೊಕದ್ದಮೆಗಳನ್ನು ಜೀವನದಲ್ಲಿ ಎದುರಿಸಿದ್ದೇನೆ. ಮಾಜಿ ಐಎಎಸ್ ಅಧಿಕಾರಿಯಾಗಿರುವ ಸೆಂಥಿಲ್ ಪ್ರಕರಣವನ್ನು ಸಿಬಿಐ, ಎನ್‌ಐಎಗೆ ವಹಿಸ ಬೇಕೆಂದು ಮನವಿ ಮಾಡಿದ್ದರೆ ಸಂತೋಷವಾಗುತ್ತಿತ್ತು ಎಂದು ಬೇಸರ ವ್ಯಕ್ತಪಡಿಸಿದರು. ಎಡಪಂಥೀಯರಾಗಿರುವ ಸಸಿಕಾಂತ್ ಸೆಂಥಿಲ್ ಅವರು ರಾಹುಲ್ ಗಾಂಧಿ ಅವರ ಬಲಗೈ ಬಂಟರು. ಅವರ ಮೂಲಕ ರಾಜ್ಯ ಸರ್ಕಾರದ ಮೇಲೆ ಒತ್ತಡ ತಂದು ವಿಶೇಷ ತನಿಖಾ ತಂಡ ರಚಿಸಿದ್ದಾರೆ. ಈ ಮೂಲಕ ದಿಕ್ಕು ತಪ್ಪಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ. ಧರ್ಮಸ್ಥಳ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವಿದ್ದು, ಸೆಂಥಿಲ್ ಅವರನ್ನುವಿಚಾರಣೆಗೆ ಒಳಪಡಿಸುವುದು ಅನುಮಾನ. ತನಿಖೆಯನ್ನು ಕೇಂದ್ರದ ಎನ್‌ಐಎ, ಸಿಬಿಐಗೆ ನೀಡಬೇಕೆಂದರು.

## ಪಿಎಂಎವೈ ಅಕ್ರಮ: ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದೆ ಕ್ರಮ

» ಮೊದಲನೇ ಪುಟದಿಂದ

ಆದರೆ ಅವರ ಲಾಗಿನ್ ದುರುಪಯೋಗ ಆಗಿದೆ. ಅಂಥಹವರಿಗೆ ತೊಂದರೆಯಾಗುವುದು ಬೇಡ ಎಂದು ಜಿಲ್ಲಾ ಪಂಚಾಯಿತಿ ಸಿಇಒಗೆ ಹೇಳಿದ್ದೇನೆ. ಆದರೆ, ಅಕ್ರಮದಲ್ಲಿ ಭಾಗಿಯಾಗಿರುವವರ ವಿರುದ್ಧ ಮುಲಾಜಿಲ್ಲದೆ ಕ್ರಮ ಆಗಬೇಕು. ದಂಡನೆಗೆ ಗುರಿಯಾಗಲೇ ಬೇಕೆಂದರು.

ಈ ಅಕ್ರಮದಲ್ಲಿ ಅಧಿಕಾರಿಗಳ ತಪ್ಪು ಗಮನಕ್ಕೆ ಬಂದರೆ ಸುಮ್ಮನೆ ಬಿಡುವುದಿಲ್ಲ. ಅದನ್ನು ಅಧಿಕಾರಿಗಳು ಅರ್ಥಮಾಡಿಕೊಂಡು ಒಳ್ಳೆಯ ಕೆಲಸ ಮಾಡಿದರೆ ನಾನು ಅವರ ಜೊತೆಗಿರುವೆ. ದುರಾಡಳಿತ ನಡೆಸುವವರ, ಹಣ ಲೂಟಿ ಮಾಡಿದರೆ ಕ್ಷಮಿಸಲ್ಲ. ಅರ್ಥಮಾಡಿಕೊಂಡು ಕೆಲಸ ಮಾಡಿದರೆ ಒಳ್ಳೆಯದು ಎಂದರು.

ಪಿಎಂಎಐ ಯೋಜನೆಯಲ್ಲಿ ಕೆಲ ನ್ಯೂನ್ಯತೆ ಇರುವುದನ್ನೇ ಕೆಲವರು ದುರುಪಯೋಗ ಪಡಿಸಿ ಕೊಂಡಿದ್ದಾರೆ. ಅವ್ಯವಹಾರ ನಡೆಸಲು ತುಂಬಾ ಬುದ್ಧಿವಂತಿಕೆ ಬಳಕೆ ಮಾಡಿದ್ದಾರೆ. ಅದನ್ನು ಒಳ್ಳೆಯದಕ್ಕೆ ಬಳಸಿದರೆ ಸರ್ಕಾರ, ಜನರಿಗೆ ಒಳ್ಳೆಯದಾಗೋದು. ಈ ರೀತಿಯ ಅಕ್ರಮ ರಾಜ್ಯದ ಬೇರೆ ಕಡೆಯಲ್ಲೂ ಆಗಿರಬಹುದು. ಸಮಗ್ರವಾಗಿ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು.

## ವಸತಿ ಗೋಲ್ಮಾಲ್: ಸಿಇಒ, ಇಒ, ಪಿಡಿಒ ಅಮಾನತುಗೊಳಿಸಿ

» ಮೊದಲನೇ ಪುಟದಿಂದ

ಅಂತಾರೆ. ಜಿಲ್ಲೆಯಲ್ಲಿ ನಡೆದಿರುವ ವಸತಿ ಹಗರಣದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಗಮನ ಹರಿಸಬೇಕು. ಸಿಇಒ ಸೇರಿ ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತುಗೊಳಿಸಿ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

ನೋಡಲ್ ಅಧಿಕಾರಿ ರಾಜೇಶ್ ತಪ್ಪು ಮಾಡಿದ್ದಾರೆ ಎಂದರೆ, ಪಿಡಿಒ, ತಾಲ್ಲೂಕು ಪಂಚಾಯಿತಿ ಇಒ, ಜಿಲ್ಲಾ ಪಂಚಾಯಿತಿ ಯೋಜನಾ ನಿರ್ದೇಶಕ, ಮುಖ್ಯ ಲೆಕ್ಕಾಧಿಕಾರಿ ಗಮನಿಸಬೇಕಿತ್ತು. ತಪ್ಪು ಮಾಡಿರುವವರ ಮೇಲೆ ಸಿಇಒ ಏಕೆ ಕ್ರಮ ಜರುಗಿಸಿಲ್ಲ ಎಂದು ಪ್ರಶ್ನಿಸಿದ ಅವರು, ಶೀಘ್ರವೇ ತಪ್ಪು ಮಾಡಿರುವವರ ಮೇಲೆ ಕ್ರಮ ಕೈಗೊಳ್ಳದಿದ್ದರೆ ಹೋರಾಟ ಅನಿವಾರ್ಯ ಎಂದು ಎಚ್ಚರಿಸಿದರು.

ವಸತಿ ಸಚಿವರು ಈ ಬಗ್ಗೆ ಗಮನ ಹರಿಸಬೇಕು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರ ಗಮನಕ್ಕೆ ಈ ವಿಷಯ ಬಂದಿಲ್ಲವೇ ಎಂದು ಪ್ರಶ್ನಿದ ಅವರು, ತಪ್ಪಿತಸ್ಥ ಅಧಿಕಾರಿಗಳನ್ನು ಕೇವಲ ಅಮಾನತಗೊಳಿಸಿದರೆ ಆಗುವುದಿಲ್ಲ. ಅವರನ್ನು ಬಂಧಿಸಿ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಅಮಿತ್‌ಶೆಟ್ಟಿ, ಗಿರೀಶ್ ನಂಬಿಹಳ್ಳಿ, ಮುಖಂಡ ಮಣಿ ಇದ್ದರು.

## ಸ್ಪೆಷಾಲಿಟಿ ಆಸ್ಪತ್ರೆ ಕಾರ್ಯಾರಂಭಕ್ಕೆ ಮಾಸ್ಟರ್ ಪ್ಲ್ಯಾನ್

» ಮೊದಲನೇ ಪುಟದಿಂದ

ಮನವಿಗೆ ಸ್ಪಂದಿಸಿದ ಸರ್ಕಾರ, ಕಟ್ಟಡಕ್ಕೆ ಬೇಕಿದ್ದ ಹೆಚ್ಚುವರಿ 9 ಕೋಟಿ ಸೇರಿ ಒಟ್ಟು 63.34 ಕೋಟಿ ರೂ. ಅನುದಾನ ನೀಡಲು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಿದೆ. ಈ ಅನು ದಾನದಿಂದ ಬಾಕಿ ಉಳಿದಿರುವ ಕಟ್ಟಡ ಕಾಮಗಾರಿಯನ್ನು ಮುಂದಿನ 4 ತಿಂಗಳಲ್ಲಿ ಮುಗಿಸಲಾಗುವುದೆಂದು ಹೇಳಿದರು.

**ಕ್ಯಾಥ್‌ಲ್ಯಾಬ್‌ಗೆ ಪ್ರಸ್ತಾವನೆ** : ಅಗತ್ಯವಿರುವ ಕ್ಯಾಥ್‌ಲ್ಯಾಬ್ ನಿರ್ಮಾಣಕ್ಕೂ 9 ಕೋಟಿ ರೂ. ವೆಚ್ಚದ ಪ್ರಸ್ತಾವನೆ ಸಿದ್ಧಪಡಿ ಸಲಾಗಿದೆ. ಅದಕ್ಕೂ ಶೀಘ್ರವೇ ಮಂಜೂರಾತಿ ಕೊಡಿಸುವ ಕೆಲಸ ಮಾಡುತ್ತೇವೆ. ಹಂತ ಹಂತ ವಾಗಿ ಎಲ್ಲಾ ರೀತಿಯ ಉದ್ದೇಶಿತ ಕಾಮಗಾರಿಗಳನ್ನು ಮುಗಿಸುವ ಮೂಲಕ ಒಂದು ವರ್ಷ ದೊಳಗೆ ಜನರಿಗೆ ಅಗತ್ಯವಿರುವ ತುರ್ತು ಆರೋಗ್ಯ ಸೌಲಭ್ಯ ಕಲ್ಪಿಸಲು ಶ್ರಮಿಸಲಾಗುವುದು ಎಂದು ಭರವಸೆ ನೀಡಿದರು.

**ನಾಲ್ಕು ಹಂತದಲ್ಲಿ ಕೆಲಸ:** ಮೊದಲು ಕಟ್ಟಡ ಕಾಮಗಾರಿ ಪೂರ್ಣಗೊಳಿಸಿ, 2ನೇ ಹಂತವಾಗಿ ಕ್ಯಾಥ್‌ಲ್ಯಾಬ್ ನಿರ್ಮಾಣ, 3ನೇ ಹಂತವಾಗಿ 22 ಕೋಟಿ ರೂ. ವೆಚ್ಚದ ಇಂಟರ್‌ನಲ್ ಕಾಮಗಾರಿ, ಅಂತಿಮವಾಗಿ 4ನೇ ಹಂತದಲ್ಲಿ ಉಪಕರಣ, ತಜ್ಞ ವೈದ್ಯರು, ಸಿಬ್ಬಂದಿ ನೇಮಕ ಇತ್ಯಾದಿ ಕೆಲಸಗಳು ಹೆಸರಿಗೆ ತಕ್ಕಂತೆ ಸೂಪರ್ ಫಾಸ್ಟ್‌ನಲ್ಲಿ ಒಂದರ ಹಿಂದೆ ಒಂದರಂತೆ ಜೊತೆಯಾಗಿ ನಡೆದರೆ ಮುಂದಿನ ಆರೇಳು ತಿಂಗಳಲ್ಲಿ ಆಗಬೇಕು ಎಂದಿಕೊಂಡಿದ್ದೇವೆ. ಕಾಲಮಿತಿಯೊಳಗೆ ಅಂದರೆ ಏಳೆಂಟು ತಿಂಗಳಲ್ಲಿ ಒಂದು ಯೋಜನೆ ಹಾಕಿಕೊಂಡು ಪೂರ್ಣಗೊಳಿಸಲಾಗುವು ದೆಂದು ಭರವಸೆ ನೀಡಿದರು.

ಗೃಹಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ, ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್. ಪೂರ್ಣಿಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಹಿಮ್ಸ್ ನಿರ್ದೇಶಕ ಡಾ.ರಾಜಣ್ಣ, ಎಂ.ಎ.ಗೋಪಾಲಸ್ವಾಮಿ ಇತರರು ಹಾಜರಿದ್ದರು.

# ಪಿಎಲ್‌ಡಿ ಬ್ಯಾಂಕ್‌ನಿಂದ 3 ಕೋ. ರೂ. ಸಾಲ ವಿತರಣೆಗೆ ಕ್ರಮ

## ಪ್ರಾಥಮಿಕ ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕ್‌ನ ವಾರ್ಷಿಕ ಸಭೆಯಲ್ಲಿ ಎ.ಮಂಜು ಘೋಷಣೆ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದ ಪ್ರಾಥಮಿಕ ಕೃಷಿ ಮತ್ತು ಭೂ ಅಭಿವೃದ್ಧಿ ಬ್ಯಾಂಕ್ 2025-2026ನೇ ಸಾಲಿಗೆ ಒಟ್ಟು 3 ಕೋಟಿ ರೂ. ಹೊಸ ಸಾಲ ವಿತರಣೆ ಮಾಡಲು ಯೋಜನೆ ರೂಪಿಸಲಾಗಿದೆ ಎಂದು ಶಾಸಕ ಎ.ಮಂಜು ಅವರು ತಿಳಿಸಿದರು.



ಪಟ್ಟಣದ ಶಿಕ್ಷಕರ ಭವನದಲ್ಲಿ ಶನಿವಾರ ನಡೆದ ಪಿಎಲ್‌ಡಿ ಬ್ಯಾಂಕ್‌ನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರೈತರು ಪಡೆದ ಸಾಲವನ್ನು ಮರುಪಾವತಿಸಿ ಹೆಚ್ಚು ವಸೂಲಾತಿ ಗುರಿ ಸಾಧನೆ ಮಾಡಲು ಸಹಕರಿಸಿ ಹಾಗೂ ಬ್ಯಾಂಕ್‌ನಲ್ಲಿ ಪಿಗ್ಮಿ ಸಂಗ್ರಹಣೆ ಮತ್ತು ನಿಶ್ಚಿತ ಠೇವಣಿ ಸಂಗ್ರಹಣೆ ಮಾಡಲಾಗುತ್ತಿದ್ದು, ಸದರಿ ಹಣದಿಂದ ಚಿನ್ನದ ಸಾಲ, ಕೃಷಿ ಸಾಲ, ನೌಕರರಿಗೆ ಸಂಬಳ ಆಧಾರಿತ ಸಾಲ ವಿತರಣೆ ಮಾಡಲಾಗುತ್ತಿದೆ. ವಿಶೇಷ ಬಡ್ಡಿ ದರದಲ್ಲಿ ಠೇವಣಿ ಸಂಗ್ರಹಿಸಲಾಗುತ್ತಿದೆ, ಸದಸ್ಯರು ಈ ಪ್ರಯೋಜನವನ್ನು ಪಡೆದು ನಿಗದಿತ ಅವಧಿಯೊಳಗೆ ಸಾಲ ಮರುಪಾವತಿಸಿ, ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಬೇಕಾಗಿ ಕೋರಿದರು.

ಬ್ಯಾಂಕಿನಲ್ಲಿ ಒಟ್ಟು ಸದಸ್ಯರ ಸಂಖ್ಯೆ 2100 ಇದ್ದು 65.51 ಲಕ್ಷ ರೂ. ಷೇರು ಬಂಡವಾಳ ಹೊಂದಿರುತ್ತದೆ. 2024-25ನೇ ಸಾಲಿ ನಲ್ಲಿ 63 ಸದಸ್ಯರಿಗೆ 1.30 ಕೋಟಿ ರೂ. ಸಾಲ ವಿತರಣೆಯಾಗಿದೆ. ಮಾರ್ಚ್ 31ರ ಅಂತ್ಯಕ್ಕೆ ಬ್ಯಾಂಕಿನ ಶೇ.26.45 ರಷ್ಟು ವಸೂಲಾತಿಯಾಗಿದೆ ಎಂದರು.

ನಬಾರ್ಡ್‌ರವರ ಷರತ್ತಿನಂತೆ ಹೊಸ ಸಾಲ ವಿತರಣೆ ಮಾಡಲು ಸಾಧ್ಯವಾಗುತ್ತಿಲ್ಲ ಹಾಗೂ ಸರ್ಕಾರದಿಂದ ಸುಸ್ತಿ ಸಾಲಗಾರರ ಮೇಲೆ ಕಾನೂನು ಕ್ರಮಕೈಗೊಳ್ಳಲು ಕಟ್ಟುನಿಟ್ಟಿನ ಆದೇಶ ಹೊರಡಿಸಿದ್ದು, ಎಲ್ಲಾ ಸುಸ್ತಿ ಸಾಲಗಾರರ ವಿರುದ್ಧ ಕಠಿಣ ಕಾನೂನು ಕ್ರಮಕೈಗೊಳ್ಳಲಾಗುತ್ತಿದೆ. ಆದ್ದರಿಂದ ಸಾಲ ಪಡೆದ ಸದಸ್ಯರು ನಿಗಧಿತ ಅವಧಿಗೆ ಕಂತನ್ನು ಮರುಪಾವತಿಸಿ, ಸರ್ಕಾರ ನಿಗಧಿ ಪಡಿಸಿರುವ ಬಡ್ಡಿ ರಿಯಾತಿಯನ್ನು ಉಪಯೋಗಿಸಿಕೊಂಡು ಬ್ಯಾಂಕ್‌ನ ಅಭಿವೃದ್ಧಿಗೆ ಸಹಕರಿಸಿ. ಸಾಲ ವಸೂಲಾತಿಗೆ ಸಹಕರಿಸಿದರೆ ಹೆಚ್ಚು ಸಾಲ ವಿತರಿಸಲು ಅನುಕೂಲವಾಗುತ್ತದೆ ಎಂದರು.

ಸಭೆಯಲ್ಲಿ ನಿರ್ದೇಶಕರು, ಅಧಿಕಾರಿಗಳು, ಸರ್ವ ಸದಸ್ಯರು, ಗ್ರಾಮಸ್ಥರು ಇತರರು ಭಾಗವಹಿಸಿದ್ದರು.

## ಅತಿಥಿ ಉಪನ್ಯಾಸಕರ ನೇಮಕಕ್ಕೆ ಎಸ್‌ಎಫ್‌ಐ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಪದವಿ ಕಾಲೇಜುಗಳಿಗೆ ಅತಿಥಿ ಉಪನ್ಯಾಸಕರ ಶೀಘ್ರ ನೇಮಿಸಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿ ಶನಿವಾರ ಸ್ಟುಡೆಂಟ್ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್ ಹಾಸನ್ ಅವರು ಮಾತ ನಾಡಿ, ಪದವಿ ತರಗತಿ ಆರಂಭವಾಗಿ 2 ತಿಂಗಳು ಕಳೆದಿದೆ. ರಾಜ್ಯದ ಬಹುತೇಕ ಸರ್ಕಾರಿ ಪದವಿ ಕಾಲೇಜು ಗಳಲ್ಲಿ ಶೇ. 70 ಕ್ಕಿಂತ ಹೆಚ್ಚು ಅತಿಥಿ ಉಪನ್ಯಾಸಕರು ಸರ್ಕಾರಿ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಕಾಲೇಜು ಪ್ರಾರಂಭವಾಗಿ 2 ತಿಂಗಳು ಕಳೆದರೂ ಅತಿಥಿ ಉಪನ್ಯಾಸಕರ ನೇಮಕಾತಿಯಾಗಿಲ್ಲ. ರಾಜ್ಯ ಸರ್ಕಾರಿ ಪದವಿ ಕಾಲೇಜುಗಳಲ್ಲಿ 10 ಸಾವಿ ರಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಹೆಚ್ಚುವರಿ ಬೋಧನಾ ಕಾರ್ಯ ಭಾರಕ್ಕೆ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಮತ್ತು ಗೊಂದಲದಿಂದಾಗಿ ಅತಿಥಿ ಉಪನ್ಯಾಸಕರ ಆಯ್ಕೆ ಪ್ರಕ್ರಿಯೆ ಸ್ಥಗಿತಗೊಂಡಿದೆ. ಅದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಹಿನ್ನಡೆಯಾಗಿದೆ ಎಂದರು.

ಉಪನ್ಯಾಸಕರಿಲ್ಲದೆ ವಿದ್ಯಾರ್ಥಿಗಳ ಬದುಕು ಅತಂತ್ರವಾಗಿದೆ. ಸರ್ಕಾರಿ ಕಾಲೇಜುಗಳಲ್ಲಿ ಬಡವ, ರೈತ, ಕಾರ್ಮಿಕ, ದಲಿತ, ಹಿಂದುಳಿದ ವಿದ್ಯಾರ್ಥಿಗಳು ಹೆಚ್ಚು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಅತಿಥಿ ಉಪ ನ್ಯಾಸಕರ ಆಯ್ಕೆ ಪ್ರಕ್ರಿಯೆಯಲ್ಲಿ ತಾರತಮ್ಯ ಮಾಡದೆ ಸೇವಾ ಹಿರಿತನದ ಆಧಾರದ ಮೇಲೆ ನೇಮಕ ಮಾಡಬೇಕೆಂದು ಹಾಗು ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವಲ್ಲಿ ಆಯೋಗ ರಚಿಸಬೇಕೆಂದು ಆಗ್ರಹಿಸಿದರು. ಡಿವೈಎಫ್‌ಐನ ಎಂ.ಜಿ.ಪೃಥ್ವಿ, ಎಸ್‌ಎಫ್‌ಐ ಕಾರ್ಯದರ್ಶಿ ವಿವೇಕ್, ಛಾಯ, ವಿಕ್ಕಿ, ರಂಗ ಅಫ್ತಾಬ್ ಇದ್ದರು.




## ಎಂಟಿಇಎಸ್‌ನ ಮೂವರು ನಿರ್ದೇಶಕರ ಅಮಾನತು

» ಮೊದಲನೇ ಪುಟದಿಂದ

ಎಂಬ ಹೋಟೆಲ್ ಉದ್ಯಮ ನಡೆಸುತ್ತಿದ್ದು, ಸಂಸ್ಥೆಗೆ ಕಟ್ಟಬೇಕಾದ 1 ಕೋಟಿ ರೂ. ಗೂ ಹೆಚ್ಚು ಬಾಡಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಎಸ್.ಜಿ.ಶ್ರೀಧರ್ ಅವರು ಅದೇ ಕಟ್ಟಡದಲ್ಲಿ ಬಾಡಿಗೆದಾರರಾದ ಎಸ್.ವಿ.ಗುಂಡೂರಾವ್ ಅಂಡ್ ಕೋ ಸಂಸ್ಥೆಯ ಪಾಲುದಾರರಾಗಿದ್ದಾರೆ. ಈ ಹಿನ್ನಲೆಯಲ್ಲಿ ಸಂಘದ ಸದಸ್ಯರ ದೂರನ್ನು ಪರಿಗಣಿಸಿ ಸಂಸ್ಥೆಯ ನಿಯಮಗಳು ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನಲೆಯಲ್ಲಿ ಮುಂದಿನ ಆದೇಶದವರೆಗೂ ಈ ಮೂವರನ್ನು ಅಮಾನತು ಮಾಡಲಾಗಿದೆ. ಸೋಮವಾರ ನಡೆಯುವ ಕಾರ್ಯಕಾರಿ ಸಮಿತಿ ಸಭೆ ಸೇರಿ ಸಂಸ್ಥೆಯ ಯಾವ ಸಭೆ ಸಮಾರಂಭಗಳಲ್ಲಿ ಭಾಗವಹಿಸದಂತೆ ಅವರಿಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

## ಪ್ರತ್ಯೇಕ ಅಪಘಾತ : ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಹಿರೀಸಾವೆ ಹಾಗು ಹಾಸನ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ಶುಕ್ರವಾರ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಬೈಕ್ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ನಂಜದೇವರಕಾವಲು ಮುಗಲೂರು ಕೆರೆ ಏರಿ ಮೇಲೆ ನಡೆದಿದೆ. ನಂಜದೇವರ ಕಾವಲು ಗ್ರಾಮದ ಜೀವನ್ (14) ಮೃತರು. ತಾಯಿ ಶೃತಿ ಯೊಂದಿಗೆ ಜೀವನ್ ಜಮೀನು ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದರು. ಕೆರೆ ಏರಿ ಮೇಲೆ ಹೋಗುತ್ತಿದ್ದಾಗ ಹಿಂದಿನಿಂದ ಜೋರಾಗಿ ಬಂದ ಬೈಕ್ ಸವಾರ ಡಿಕ್ಕಿ ಮಾಡಿ ದ್ದಾನೆ. ಅಪ ಘಾತದ ರಭಸಕ್ಕೆ ಬಾಲಕನ ಮುಖ, ತಲೆ, ದೇಹದ ಇತರೆ ಭಾಗಗಳಿಗೆ ಬಲವಾದ ಪೆಟ್ಟು ಬಿದ್ದ ಪರಿಣಾಮ ಮೃತಪಟ್ಟಿದ್ದಾನೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಕಾರು ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಚನ್ನರಾಯಪಟ್ಟಣ ತಾಲ್ಲೂಕು ಕರಿಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದಿದೆ. ದಿಡಗ ಬಾರೆ ಗ್ರಾಮದ ದುನಿಯ ಮೃತರು. ಕೂಲಿ ಕೆಲಸಕ್ಕೆಂದು ದಬ್ಬೆ ಘಟ್ಟ ಗ್ರಾಮಕ್ಕೆ ತೆರಳಿದ್ದ ತಮ್ಮ ಸಹೋದರಿ ಭಾಗ್ಯ ಅವರನ್ನು ಬೈಕ್‌ನಲ್ಲಿ ಕೂರಿಸಿಕೊಂಡು ಬರುತ್ತಿದ್ದಾಗ ಎದುರು ಗಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ತೀವ್ರ ರಕ್ತಸ್ರಾವವಾಗಿ ವ್ಯಕ್ತಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜನಸ್ಪಂದನಾ ಸಭೆಯಲ್ಲಿ ಸಾವಿರ ಅಹವಾಲು

» ಮೊದಲನೇ ಪುಟದಿಂದ

ಹೆಚ್‌ಆರ್‌ಪಿಯಲ್ಲಿ ಸಾಕಷ್ಟು ಅಕ್ರಮಗಳಿವೆ, ಎಲ್ಲವನ್ನೂ ಅಕ್ರಮ ಎಂದು ಪರಿಗಣಿಸಲು ಸಾಧ್ಯವಿಲ್ಲ. ಅರ್ಹರಿಗೆ ಪರಿಹಾರ ಕಲ್ಪಿಸಲು ಒಂದು ಸಮಿತಿ ರಚಿಸಿ, ಪರಿಶೀಲನೆ ನಡೆಸಿ ಕ್ರಮ ತೆಗೆದುಕೊಳ್ಳಲಾಗುವುದು. ಹಲವು ವರ್ಷಗಳಿಂದ ಸಾಗುವಳಿ ಮಾಡಿಕೊಂಡು ಬಂದಿರು ವವರಿಗೆ ನ್ಯಾಯಾಲಯದ ನಿಯಮದ ಪ್ರಕಾರ ಮಂಜೂರಾತಿ ನೀಡಲಾಗುವುದು. ದುರಸ್ತು ದಾಖಲೆಗಳ ಸರಳೀಕರಣ ಗೊಳಿಸಿದ ನಂತರವೂ ದಾಖಲೆ ಇಲ್ಲದವರು ಬಂದಿದ್ದಾರೆ. 1960 ರಿಂದ 90ರವರೆಗೆ ಮಂಜೂರಾ ಗಿರುವ ಜಮೀನಿಗೆ ದಾಖಲೆಗಳು ಕಾಣೆಯಾಗಿವೆ. ಅವೆಲ್ಲ ದಾಖಲೆ ಕಾಣೆ ಸಮಿತಿಗೆ ಹೋಗಿವೆ. ಕನಿಷ್ಠ ಎರಡು ದಾಖಲೆಗಳಿವೆ ಅವುಗಳನ್ನು ಪರಿಶೀಲಿಸು ವಂತೆ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದೇನೆಂದು ತಿಳಿದರು.



**ಕಂದಾಯ ಇಲಾಖೆಯದ್ದೇ ಹೆಚ್ಚು ಅರ್ಜಿ**

ಕೃಷ್ಣಬೈರೇಗೌಡ ಅವರು ಜಿಲ್ಲಾ ಉಸ್ತುವಾರಿ ಜೊತೆಗೆ ಕಂದಾಯ ಸಚಿವರೂ ಆಗಿರುವುದರಿಂದ ಜನಸ್ಪಂದನಾ ಸಭೆಯಲ್ಲಿ ಅವರ ಇಲಾಖೆಗೆ ಸಂಬಂಧಿಸಿದ ಅತೀ ಹೆಚ್ಚು ಅರ್ಜಿಗಳು ಸಲ್ಲಿಕೆಯಾದವು. ಅವುಗಳಲ್ಲಿ ಹೇಮಾವತಿ ಭೂಸಂತ್ರಸ್ತರ ಅರ್ಜಿಗಳೇ ಹೆಚ್ಚಿನವು ಗಳಿದ್ದವು. ಹೆಚ್‌ಆರ್‌ಪಿಗೆ ಸಂಬಂಧಿಸಿದ ಅರ್ಜಿದಾರರಿಗೆ ಉತ್ತರಿಸಿದ ಸಚಿವರು, ಕೋರ್ಟ್‌ಗೆ ಹೋಗಿರುವವರಿಗೆ ಇಲ್ಲಿ ಯಾವುದೇ ಪರಿಹಾರ ದೊರಕಿಸಿಕೊಡಲು ಆಗುವುದಿಲ್ಲ. ಅರ್ಹರಿಗೆ ಭೂ ಮಂಜೂರಾತಿ ದೊರಕಿಸಿಕೊಡಲು ಪ್ರಮಾಣಿಕ ಪ್ರಯತ್ನ ನಡೆಸಲಾಗುವುದು. ಒಂದೇ ಪ್ರಕರಣಕ್ಕೆ ನಾಲ್ಕೈದು ಜನರು ಪರಿಹಾರಕ್ಕಾಗಿ ಅರ್ಜಿ ಹಾಕಿಕೊಂಡಿದ್ದಾರೆ. ನೈಜವಲ್ಲದ ಹಲವು ಪ್ರಕರಣಗಳಿವೆ, ಈ ಬಗ್ಗೆ ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

**ಜಮೀನು ಬದಲು ನಿವೇಶಕ್ಕೆ ಕ್ರಮ**

ನಿವೃತ್ತ ಯೋಧರು ತಮಗೆ ಜಮೀನು ನೀಡುವಂತೆ ಜನಸ್ಪಂದನಾ ಸಭೆಯಲ್ಲಿ ಸಚಿವರಿಗೆ ಮನವಿ ಸಲ್ಲಿಸಿದರು. ಅದಕ್ಕೆ ಪ್ರತಿಕ್ರಿಯಿಸಿದ ಕೃಷ್ಣಬೈರೇಗೌಡ ಅವರು, ಅರೆಸೇನಾಪಡೆ, ಭೂಸೇನೆ, ವಾಯುಪಡೆ, ವಾಯುಪಡೆಯ ಎಲ್ಲಾ ನಿವೃತ್ತ ಯೋಧರಿಗೆ ಜಮೀನು ನೀಡಲು ಸರ್ಕಾರಿ ಭೂಮಿ ಇಲ್ಲ. ಜಮೀನಿನ ಬದಲು ನಿವೇಶನ ನೀಡಲು ಕ್ರಮ ವಹಿಸಲಾಗುವುದು. ಜಮೀನು ಮಂಜೂರಾತಿ ಭರವಸೆ ನೀಡಿದ್ದ ಹಲವು ನಿವೃತ್ತ ಯೋಧರು ಇದೇ ವೇಳೆ ಮನವಿ ಸಲ್ಲಿಸಿದರು.

**ಗೋಲ್ಮಾಲ್ ಮಾಡಲು ಆಗಲ್ಲ**

ಸಾರ್ವಜನಿಕರು ಜನಸ್ಪಂದನಾ ಸಭೆಯಲ್ಲಿ, ನಾನು ಮಾಡಬಹುದಾದ ಕೆಲಸಗಳನ್ನು ಮಾತ್ರ ಕೇಳಿ. ಆಗದೆ ಇರುವುದನ್ನು ಕೇಳಿದರೆ ಗೋಲ್ಮಾಲ್ ಮಾಡಲು ಆಗುವುದಿಲ್ಲ. ಮಾಡಬೇಕಿರುವ ಕೆಲಸಕ್ಕೆ ಸಮಯವಿಲ್ಲ, ಈ ನಡುವೆ ಆಗದೆ ಇರುವ ಕೆಲಸಕ್ಕೆ ಸಮಯ ವ್ಯರ್ಥ ಮಾಡುವುದರಲ್ಲಿ ಯಾವುದೇ ಪ್ರಯೋಜನವಿಲ್ಲ. ಹಿಂದೆ ಯಾರೋ ಮಾಡಿದರು ಎಂದು ಈಗ ಮಾಡಿಕೊಡಿ ಎಂದು ನನ್ನನ್ನು ಕೇಳಿದರೆ ಆಗುವುದಿಲ್ಲ ಎಂದು ಕಂದಾಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಹಿಡಿದು ತಂದಿದ್ದ ಜನರಿಗೆ ಸ್ಥಳದಲ್ಲೇ ಕಡ್ಡಿಮುರಿದಂತೆ ಹೇಳಿ ಕಳುಹಿಸಿದರು.

## ಹೃದಯ ಶ್ರೀಮಂತಿಕೆ ಮೆರೆದರಷ್ಟೇ ನೆಮ್ಮದಿ ಬದುಕು

» ಮೊದಲನೇ ಪುಟದಿಂದ

ಶಿಕ್ಷಣ ಪಡೆದು ಒಳ್ಳೆಯ ಪ್ರಜೆಗಳಾಗಿ ಬೆಳೆಯಬೇಕೆಂದು ಸಲಹೆ ನೀಡಿದರು.

ನೇಕಾರ ಸಮಾಜದಲ್ಲಿ 29 ಪಂಗಡಗಳಿದ್ದು, ನಮ್ಮ ನೇಕಾರ ಸಮುದಾಯದಲ್ಲಿ ದೇವಾಂಗ ಜನಾಂಗದ ಜೊತೆಗೆ ದೇವಾಂಗ ಕ್ರಿಶ್ಚಿಯನ್ ಎಂದು ಸೇರಿಸಲಾಗಿದೆ. ಇದೇ ರೀತಿ ಒಕ್ಕಲಿಗ ಜನಾಂಗ ಸೇರಿ ಎಲ್ಲಾ ಜನಾಂಗದ ಹೆಸರಿನ ಜತೆಗೆ ಕ್ರಿಶ್ಚಿಯನ್ ಎಂದು ಸೇರಿಸಲಾಗಿದೆ. ಆದ್ದರಿಂದ ಪ್ರತಿಯೊಬ್ಬರು ಜಾತಿ ಗಣತಿ ಸಂದರ್ಭದಲ್ಲಿ ದೇವಾಂಗವೆಂದು ಮಾತ್ರ ನಮೂದಿಸಿ ಜನಾಂಗದ ಒಗ್ಗಟ್ಟು ಪ್ರದರ್ಶಿಸುವ ಜತೆಗೆ ನಮ್ಮ ಸಮಾಜದ ಏಳಿಗೆಗೆ ಶ್ರಮಿಸಬೇಕಿದೆ ಎಂದರು.

ಶ್ರೀ ದಯಾನಂದಪುರಿ ಸ್ವಾಮೀಜಿ ಹಾಗು ಶ್ರೀ ಶಿವಾನಂದ ಸ್ವಾಮೀಜಿ ಆಶೀರ್ವಚನ ನೀಡಿದರು. ಮಡಿಕೇರಿ ಅಬಕಾರಿ ಇಲಾಖೆ ಉಪ ಆಯುಕ್ತ ನಾಗೇಶ್ ಕುಮಾರ್, ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಜಂಟಿ ಆಯುಕ್ತ ಜಿ.ಆರ್. ಮಂಜೇಶ್, ನಿಕಟಪೂರ್ವ ಜಿಲ್ಲಾಧ್ಯಕ್ಷ ಬಿ.ಸೋಮಶೇಖರ್, ದೇವಾಂಗ ಜನಾಂಗದ ರಾಜ್ಯಾಧ್ಯಕ್ಷ ರವೀಂದ್ರ, ಕಲಬುರ್ಗಿ ಮಾತನಾಡಿದರು.

ದೇವರಾಜ ಅರಸು ಹಿಂದುಳಿದ ವರ್ಗಗಳ ನಿಗಮ ಅಧ್ಯಕ್ಷ ಕೀರ್ತಿ ಗಣೇಶ್, ಜಿಲ್ಲಾ ದೇವಾಂಗ ನೌಕರರ ಸಂಘ ಅಧ್ಯಕ್ಷ ಡಾ. ಬಿ.ಎಂ.ವಿಜಯ್, ಗೌರವಾಧ್ಯಕ್ಷ ಜಿ.ಎಸ್. ಸತೀಶ್, ಲೆಕ್ಕಪರಿಶೋಧಕ ಜಲೇಂದ್ರ, ಡಾ. ರಾಜೇಶ್, ವಕೀಲ ಎಲ್. ಪುರುಷೋತ್ತಮ್, ಶಂಕರಶೆಟ್ಟಿ, ತ್ಯಾಗರಾಜ್, ಕವಿತಾ ಇತರರು ಹಾಜರಿದ್ದರು.



**ಕೊಣನೂರು: ಅರಕಲಗೂಡು ತಾಲ್ಲೂಕಿನ ಸಿದ್ದಾಪುರ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ಕೊಣನೂರು ಹೋಬಳಿ ಮಟ್ಟದ ಕ್ರೀಡಾಕೂಟಕ್ಕೆ ಕೆಸವತ್ತೂರು ಮಠದ ಶ್ರೀ ಬಸವರಾಜೇಂದ್ರ ಸ್ವಾಮೀಜಿ ಚಾಲನೆ ನೀಡಿದರು. ಬಾಲಕಿಯರ ವಿಭಾಗದಲ್ಲಿ ಬಿದರೂರು ಶಾಲೆ, ಬಾಲಕರ ವಿಭಾಗದಲ್ಲಿ ಹಂಡ್ರಂಗಿ ಶಾಲೆ ಸಮಗ್ರ ಪ್ರಶಸ್ತಿ ಪಡೆದವು. ಶಿಕ್ಷಕರಾದ ನಾಗರಾಜು ಕೋಟೆಕಾರ್, ಸಿದ್ದಮಲಪ್ಪ, ಜಗದೀಶ್, ಸವಿತಾ, ಲೋಕನಾಥ್ ಇದ್ದರು.**

## ಚಿನ್ನಾಭರಣ ಕಳವು

**ಹೊಳೆನರಸೀಪುರ:** ಹಾಡ ಹಗಲೇ ಮನೆಯ ಹಿಂಬಾಗಿಲು ತಳ್ಳಿ ಒಳಬಂದಿರುವ ಕಳ್ಳರು ಕುಡುಗೋಲಿನಿಂದ ಬೀರುವಿನ ಬಾಗಿಲು ಮುರಿದು ನಗದು ಸೇರಿ 4.95 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ತಾಲ್ಲೂಕಿನ ಸಿಗರನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಹಾಸನದ ಗಾರ್ಮೆಂಟ್ಸ್ ಫ್ಯಾಕ್ಟರಿ ಉದ್ಯೋಗಿ ಪುಷ್ಪ ಅವರ ಮನೆಯಲ್ಲಿ ಕಳ್ಳತನ ನಡೆದಿದೆ. ಸೆ.4ರ ಸಂಜೆ ಕೆಲಸ ಮುಗಿಸಿ ಮನೆಗೆ ತೆರಳಿದ್ದ ಅವರು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಹಿಂಬಾಗಿಲ ತಳ್ಳಿ ಒಳಗೆ ಪ್ರವೇಶಿಸಿರುವ ಕಳ್ಳರು ಬೀರು ಮುರಿದು 2.58 ಲಕ್ಷ ರೂ. ನಗದು, 30 ಗ್ರಾಂ ತೂಕದ ಚಿನ್ನದ ಕೊರಳಿನ ಗುಂಡಿನ ಸರ, 20 ಗ್ರಾಂ ತೂಕದ ಚಿನ್ನದ 2 ಕೈ ಬಳೆ, 4 ಗ್ರಾಂ ತೂಕದ ಚಿನ್ನದ ಬೆಳೆಹರಳಿನ ಓಲೆ, 4 ಗ್ರಾಂ ಹಾಗು 3 ಗ್ರಾಂ ತೂಕದ ಎರಡು ಜೊತೆ ಚಿನ್ನದ ಮಾಟಿ, 4 ಗ್ರಾಂ ತೂಕದ ಚಿನ್ನದ ಹ್ಯಾಂಗಿಂಗ್ಸ್, 3 ಗ್ರಾಂ ತೂಕದ ಚಿನ್ನದ ಉಂಗುರ, 3 ಗ್ರಾಂ ಹಾಗು 8 ಗ್ರಾಂ ತೂಕದ ಚಿನ್ನದ 2 ಜೊತೆ ಬಳೆ ಕಳವು ಮಾಡಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವ್ಯಾನಿಟಿ ಬ್ಯಾಗ್‌ನಿಂದ ಚಿನ್ನಾಭರಣ ಕಳವು

**ಬೇಲೂರು:** ಕೆಎಸ್‌ಆರ್‌ಟಿಸಿ ಬಸ್ ಹತ್ತುವಾಗ ನೂಕುನುಗ್ಗಲಿನಲ್ಲಿ ಮಹಿಳೆಯೊಬ್ಬರ ವ್ಯಾನಿಟಿ ಬ್ಯಾಗ್‌ನಿಂದ 50 ಸಾವಿರ ರೂ. ಮೌಲ್ಯದ ಚಿನ್ನಾಭರಣ ದೋಚಿರುವ ಘಟನೆ ಪಟ್ಟಣದ ಬಸ್ ನಿಲ್ದಾಣದಲ್ಲಿ ನಡೆದಿದೆ.

ಪಟ್ಟಣದ ಕುಂಬಾರ ಬೀದಿ ನಿವಾಸಿ ಆಶೀಕ ಅವರು ಮೂಡಿಗೆರೆಗೆ ತೆರಳುತ್ತಿದ್ದರು. ಜನರು ನೂಕಾಟದಲ್ಲಿ ಬಸ್ ಹತ್ತುತ್ತಿ ದ್ದಾಗ ಹಿಂದಿನಿಂದ ಯಾರೋ ವ್ಯಾನಿಟಿ ಬ್ಯಾಗ್ ಎಳೆದದ್ದು ಗೊತ್ತಾಗಿದೆ. ಆಶೀಕಾ ಅವರು ತಕ್ಷಣವೇ ಹಿಂದೆ ನೋಡಿದಾಗ ಬ್ಯಾಗ್‌ನಿಂದ ಚಿನ್ನಾಭರಣ ದೋಚಿದ್ದಾರೆ.

### ಶ್ರವಣಬೆಳಗೊಳದಲ್ಲಿ ಉಚಿತ ಆರೋಗ್ಯ ತಪಾಸಣೆ-ರಕ್ತದಾನ ಶಿಬಿರ

# ರಕ್ತದಾನದಿಂದ ಆರೋಗ್ಯ ವೃದ್ಧಿ : ಡಾ|| ಅರುಣ್‌ಕುಮಾರ

• ಪ್ರಜೋದಯ ವರದಿ

**ಶ್ರವಣಬೆಳಗೊಳ:** ರಕ್ತದಾನವು ಮನುಷ್ಯನ ಆರೋಗ್ಯಕ್ಕೆ ಅತ್ಯಂತ ಅವಶ್ಯಕವಾದ ಕಾರ್ಯ ವಾಗಿದ್ದು, ತುರ್ತು ಸಂದರ್ಭದಲ್ಲಿ ಜೀವ ಉಳಿಸಲು ಹಾಗೂ ನಮ್ಮ ಆರೋಗ್ಯವನ್ನು ವೃದ್ಧಿಸಲು ಸಹಾಯ ಮಾಡುತ್ತದೆಂದು ಶ್ರವಣಬೆಳಗೊಳ ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ಡಾ|| ಅರುಣ್‌ಕುಮಾರ ಅವರು ಹೇಳಿದರು.



ಪಟ್ಟಣದ ಗಣಪತಿ ಪೆಂಡಾಲ್‌ನಲ್ಲಿ ಶ್ರೀ ಪ್ರಸನ್ನ ಗಣಪತಿ ಸೇವಾ ಸಮಿತಿ ವತಿಯಿಂದ ಭಾರತಿಯ ರೆಡ್‌ಕ್ರಾಸ್, ಮೈಸೂರಿನ ನಾರಾಯಣ ಆಸ್ಪತ್ರೆ, ಹಾಸನದ ಅಮ್ಮ ಕಣ್ಣಿನ ಆಸ್ಪತ್ರೆ, ಚನ್ನರಾಯಪಟ್ಟಣದ ಸ್ವಯಂಪ್ರೇರಿತ ರಕ್ತ ಕೇಂದ್ರ, ಗ್ರಾಮ ಪಂಚಾಯಿತಿ ಹಾಗೂ ಸಮುದಾಯ ಆರೋಗ್ಯ ಕೇಂದ್ರದ ವತಿಯಿಂದ ಶನಿವಾರ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ರಕ್ತದಾನ ಜೀವದಾನ ವಾಗಿದ್ದು, ಇದು ಮನುಷ್ಯನು ಮನುಷ್ಯನಿಗೆ ನೀಡಬಹುದಾದ ಅತಿದೊಡ್ಡ ಕೊಡುಗೆಯಾಗಿದೆ. ಅನೇಕ ಅಪಘಾತ ಸಂದರ್ಭಗಳಲ್ಲಿ ಗಾಯಗೊಂಡ ಅಥವಾ ತೀವ್ರ ರಕ್ತಸ್ರಾವದಿಂದ ಬಳಲುತ್ತಿ ರುವ ರೋಗಿಗಳ ಜೀವ ರಕ್ಷಣೆ ಮಾಡಲು ಸಹಕಾರಿಯಾಗುವುದರ ಜೊತೆಗೆ ಅವಶ್ಯಕ ಸಮಯ ದಲ್ಲಿ ಜೀವನದ ಆಶಾಕಿರಣ ಒದಗಿಸುತ್ತದೆ ಎಂದರು.

ರಕ್ತದಾನದಿಂದ ನಮ್ಮ ಆರೋಗ್ಯಕ್ಕೂ ಸಹಾಯಕವಾಗಿದ್ದು, ನಮ್ಮ ದೇಹದ ರಕ್ತದಲ್ಲಿರುವ ಕೊಲೆಸ್ಟ್ರಾಲ್ ಹೊರಹಾಕಿ ಹೊಸ ರಕ್ತ ಉತ್ಪತ್ತಿಯಾಗುತ್ತದೆ ಮತ್ತು ಹೃದಯ ಘಾತ, ರಕ್ತದ ಒತ್ತಡವನ್ನು ನಿಯಂತ್ರಣದಲ್ಲಿಡಲು ಸಹಕಾರಿ ಎಂದು ಹೇಳಿದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಅಫ್ತಾಬ್ ಪಾಷಾ ಅವರು ಮಾತನಾಡಿ, ರಕ್ತದಾನವು ಜನರ ನಡುವೆ ಸಹಕಾರ ಭಾವನೆಯ ಮೂಲಕ ಸಮಾಜದಲ್ಲಿ ಬಾಂಧವ್ಯವನ್ನು ಹೆಚ್ಚಿಸುತ್ತದೆ. ಇಂತಹ ಕಾರ್ಯಕ್ರಮಗಳು ಯುವಜನತೆಗೆ ಪ್ರೇರಣೆಯಾಗಿದ್ದು, ಗ್ರಾಮೀಣ ಭಾಗದಲ್ಲಿ ಉಚಿತ ಆರೋಗ್ಯ ಶಿಬಿರ ನಡೆಯುವುದರಿಂದ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಪುಷ್ಟಿ ನೀಡುತ್ತವೆ. ಮುಂದೆಯೂ ಇಂತಹ ಶಿಬಿರಗಳನ್ನು ಹೆಚ್ಚಾಗಿ ಆಯೋಜನೆ ಮಾಡಲಾಗುವುದೆಂದು ಹೇಳಿದರು.

ಶಿಬಿರದಲ್ಲಿ ಹೃದಯ ಸಂಬಂಧಿತ ಇಸಿಜಿ, ಬಿಪಿ, ಶುಗರ್, ಕಣ್ಣು ಪರೀಕ್ಷೆ, ಕೀಲು ಮತ್ತು ಮೂಳೆ ತಪಾಸಣೆ, ಪ್ರಸೂತಿ ಮತ್ತು ಸ್ತ್ರೀ ರೋಗ ಹಾಗೂ ಇತರೆ ಖಾಯಿಲೆಯ ಸಂಬಂಧಿಸಿದಂತೆ283 ಜನರ ತಪಾಸಣೆ ಮಾಡಲಾಯಿತು. 41 ಜನ ರಕ್ತದಾನ ಮಾಡಿದರು. ರಕ್ತದಾನ ಮಾಡಿದವರಿಗೆ ಪ್ರಮಾಣಪತ್ರ ನೀಡಲಾಯಿತು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಶರತ್‌ಕುಮಾರ್, ಎಸ್.ಟಿ. ಮಹೇಶ್, ಎಸ್.ಆರ್.ಲೋಕೇಶ್, ಭಾರತಿ ಚಂದ್ರೇಗೌಡ, ಶ್ರೀ ಪ್ರಸನ್ನ ಗಣಪತಿ ಸೇವಾ ಸಮಿತಿ ಪದಾಧಿಕಾರಿ ಗಳಾದ ಅಶೋಕ್, ಸುಕುಮಾರ್, ಗೋವಿಂದ ರಾಜ್, ನಾಗೇಂದ್ರ, ರಂಗಸ್ವಾಮಿ, ಡೋಲಿ ಅಶೋಕ್, ನವೀನ್, ಧರ್ಮರಾಜ್, ಸೋಮೇಶ್, ಸ್ವಯಂಪ್ರೇರಿತ ರಕ್ತ ಕೇಂದ್ರ ಮುಖ್ಯಸ್ಥ ಹೆಚ್.ಜಿ.ಭರತ್‌ಕುಮಾರ್, ನಾರಾಯಣ ಆಸ್ಪತ್ರೆಯ ಡಾ||ಜೀವನ್, ಡಾ||ಸಂಸದ, ಡಾ||ಸಂದೀಪ್ ಹಾಗೂ ಆಪ್ತ ಸಮಾಲೋಚಕ ಎಸ್.ಮಹಾದೇವ್ ಇದ್ದರು.

## ಬ್ಯಾಡ್ಮಿಂಟನ್ ಟೂರ್ನಮೆಂಟ್ ಯಶಸ್ವಿ



• ಪ್ರಜೋದಯ ವರದಿ

**ಹಾಸನ:** ನಗರದ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಗಣೇಶೋತ್ಸವ ಪ್ರಯುಕ್ತ ಮೂರು ವಿಭಾಗಗಳಲ್ಲಿ ಬ್ಯಾಡ್ಮಿಂಟನ್ ಟೂರ್ನಮೆಂಟ್ ಆಯೋಜಿಸಲಾಗಿತ್ತು.

ಪುರುಷರ ಡಬಲ್ಸ್, 40 ವರ್ಷ ಮೇಲ್ಪಟ್ಟ ಡಬಲ್ಸ್ ವಿಭಾಗ, ಮಹಿಳೆ ಯರ ಸಿಂಗಲ್ಸ್ ಮತ್ತು ಮಿಕ್ಸೆಡ್ ಡಬಲ್ಸ್ ವಿಭಾಗಗಳಲ್ಲಿ ಪಂದ್ಯಾವಳಿ ನಡೆಯಿತು. 50 ಕ್ಕೂ ಹೆಚ್ಚು ಸದಸ್ಯರು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದು, ಗೆದ್ದವರಿಗೆ ಟ್ರೋಫಿ ನೀಡಿ ಗೌರವಿಸಲಾಯಿತು.

ಪುರುಷರ ಡಬಲ್ಸ್ ಓಪನ್ ವಿಭಾಗ : ರಾಜು ಹಾಗು ಆಯುಷ್ ಪ್ರಥಮ, ಸತೀಶ್ ಮತ್ತು ಮೋಹನ್ ದ್ವಿತೀಯ, 40 ವರ್ಷ ಮೇಲ್ಪಟ್ಟ ಪುರುಷರ ಡಬಲ್ಸ್ ವಿಭಾಗದಲ್ಲಿ ರಾಜು ಹಾಗು ಮಂಜೇಗೌಡ, ಹರೀಶ್ ಮತ್ತು ವಿಜಯಕುಮಾರ್ ದ್ವಿತೀಯ ಬಹುಮಾನ ತಮ್ಮದಾಗಿಸಿ ಕೊಂಡರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅಕ್ಷತ ಪ್ರಥಮ, ಎರಡನೇ ಬಹುಮಾನವನ್ನು ಲೀಸಾ ಪಡೆ ದರು. ಮಿಕ್ಸೆಡ್ ಡಬಲ್ಸ್‌ನಲ್ಲಿ ರಾಜೀವ್ ಹಾಗು ಅಕ್ಷತಾ ಪ್ರಥಮ, ಎರಡನೇ ಬಹುಮಾನವನ್ನು ಡಾ.ರಾಕೇಶ್ ಹಾಗು ಲೀಸಾ ತಮ್ಮದಾಗಿಸಿಕೊಂಡರು. ವಿಜೇತರಿಗೆ ಹೊಯ್ಸಳ ಸ್ಪೋರ್ಟ್ಸ್ ಅಕಾಡೆಮಿ ಪದಾಧಿಕಾರಿಗಳು ಹಾಗೂ ಬ್ಯಾಡ್ಮಿಂಟನ್ ಕೋಚ್ ಧೀಮಂತ್ ಪ್ರಶಸ್ತಿ ನೀಡಿ ಅಭಿನಂದಿಸಿದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019